www.buntsanghablr.com

ಸೆಪ್ಟಂಬರ್ 2016 ಸಂಪುಟ 12 ಸಂಚಿಕೆ 9

# ಸ್ನೇಹ ಚಿಂತನೆ

ಮಾಸ ಪತ್ರಿಕೆ



ಬಿ.ಎಸ್.ಆರ್.ಎನ್.ಎಸ್.ವಿ.ಯಲ್ಲಿ ಸ್ವಾತಂತ್ರ್ಯ ದಿನಾಚರಣೆ




ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ
ಗಣೇಶ ಚತುರ್ಥಿಯ ಆಚರಣೆ



BUNTS' SANGHA BANGALORE
324, Chord Road, Viajyanagar, Bengaluru - 560 040.
P : 080 - 2339 9323 / 2339 9635 E: info@buntsanghablr.com

ಸಂಚಿಕೆ ಬೆಲೆ ರೂ. 1/-


Swathi
GROUP
Since 1994
ಸ್ವಾತಿ
ಗ್ರೂಪ್
Variety is the spice of life!
Making Every Occasion Memorable
Buffet, Cocktail Party
Corporate Wedding
Banquet Function
Social Gatherings
Birthday Party
Customized Menu Planning | Theme Evening | Live Counter
RESTAURANTS • BANQUETS • CATERER
www.swathigroup.co.in, info24@swathigroup.co.in, swathigroup
Call @ : +91 95909 02424, 99000 32100, 99000 41888

ADVT

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 12 SEPTEMBER 2016 ISSUE 09**

**ಸಾಹಿತ್ಯ - ಪ್ರಕಾಶನ ಸಮಿತಿ**

**ಅಧ್ಯಕ್ಷರು :**

ಎಸ್. ಅಶೋಕ್‌ಕುಮಾರ್ ಶೆಟ್ಟಿ

**ಗೌ॥ ಸಂಪಾದಕರು:**

ರವಿರಾಜ್ ಎಸ್. ಶೆಟ್ಟಿ

**ಪೋಷಕ ಸದಸ್ಯರು:**

ಶ್ರೀಮತಿ ಮನೋರಮ ಚೌಟ

ಶ್ರೀಮತಿ ವೇದ ಎಸ್. ಶೆಟ್ಟಿ

ಶ್ರೀ ಬಿ. ಕುಸುಮಾಕರ ಶೆಟ್ಟಿ

ಶ್ರೀ ಆರ್.ಎಸ್. ಶೆಟ್ಟಿ

ಶ್ರೀಮತಿ ವಸಂತಿ ಪಿ. ಶೆಟ್ಟಿ

ಶ್ರೀ ಪ್ರಕಾಶ್ ಶೆಟ್ಟಿ

ಶ್ರೀ ಎ.ಜೆ. ಶೆಟ್ಟಿ

ಶ್ರೀಮತಿ ಗೀತ ಭಗವಾನ್‌ದಾಸ್ ರೈ

ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ

ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು**

ಸಂತೋಷ್ ಶೆಟ್ಟಿ. ಜೆ

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

–ಸಂಪಾದಕ

## ಈ ಸಂಚಿಕೆಯಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌ॥ ಕಾರ್ಯದರ್ಶಿ ವರದಿ | 5 |
| 4. | ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ ಸ್ವಾತಂತ್ರ್ಯ ದಿನಾಚರಣೆ | 6 |
| 5. | ಮಹಿಳಾ ವಿಭಾಗ–'ದಸರಾ ಆಚರಣೆ' | 7 |
| 6. | ಸಂಪನ್ನ ಪ್ರಾರ್ಥನೆ | 8 |
| 7. | ಧರ್ಮ ಮತ್ತು ಆಧ್ಯಾತ್ಮ | 10 |
| 8. | UPSC ರ್‍ಯಾಂಕ್ ವಿಜೇತೆ ನಿವ್ಯಾ ಪಿ. ಶೆಟ್ಟಿ | 13 |
| 9. | ಕಾರ್ಯಕಾರಿ ಸಮಿತಿಯ ನಾಮನಿರ್ದೇಶಿತ ಮತ್ತು ಡೋನರ್ ಟ್ರಸ್ಟಿ ಸದಸ್ಯರು | 14 |
| 10. | ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನಕ್ಕೆ 25ರ ಸಂಭ್ರಮ | 18 |
| 11. | ಶಿವಾಂಬು ಕಲ್ಪ | 26 |
| 12. | Matrimonial | 29 |

**ಮುಖ ಪುಟ**

**ಬಂಟ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ ಸ್ವಾತಂತ್ರ್ಯ ದಿನಾಚರಣೆ**



**ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ಗಣೇಶ ಚತುರ್ಥಿಯ ಸಂಭ್ರಮ**



# ಸಂಪಾದಕೀಯ

ನೂತನವಾಗಿ ಆಯ್ಕೆಯಾದ ಎಲ್ಲಾ ಪದಾಧಿಕಾರಿಗಳಿಗೆ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಶುಭ ಹಾರೈಕೆಗಳು. ಸಂಘದ ಬಗೆಗೆ ತಮ್ಮದೇ ಕನಸುಗಳನ್ನು ಹೊತ್ತು ಆಡಳಿತ ಚುಕ್ಕಾಣಿ ಹಿಡಿದಿರುವ ಎಲ್ಲರೂ ಒಂದು ತಂಡವಾಗಿ ಕಾರ್ಯನಿರ್ವಹಿಸುವ ಮೂಲಕ ತಮ್ಮ ಸಂಘಮುಖಿ ಚಿಂತನೆಯ ಕನಸುಗಳು ಸಾಕಾರಗೊಳ್ಳಲಿ.

ಅತ್ಯಂತ ವೇಗದ ಬದಲಾವಣೆಯ ಯುಗದಲ್ಲಿ ನಾವು ನಮ್ಮನ್ನು ಒಗ್ಗಿಸಿಕೊಳ್ಳಬೇಕಾಗಿರುವುದು ಇಂದಿನ ಅನಿವಾರ್ಯವಾಗಿದೆ. ಅಭಿವೃದ್ಧಿ ಯೋಜನೆಗಳ ಕಾರ್ಯರೂಪಕ್ಕೆ ತರುವಲ್ಲಿ ಆಮೆನಡಿಗೆ ಸಲ್ಲದು !. 60 ವರ್ಷಗಳ ನಂತರ ನಾವು ಭವಿತವ್ಯದ ಯೋಜನೆಗಳ ಬಗ್ಗೆ ಪೀಠಿಕೆಯ ಮಾತನಾಡುತ್ತಿದ್ದೇವೆ. ಸಂಘವು ಮುಂದಿನ 10-20 ವರ್ಷಗಳಲ್ಲಿ ಹೇಗಿರಬೇಕೆಂಬ ಪಕ್ಷಿನೋಟದ ನೀಲನಕ್ಷೆಯೊಂದಿಗೆ ಕ್ಷಿಪ್ರಗತಿಯಲ್ಲಿ ಕಾರ್ಯೋನ್ಮುಖವಾಗಬೇಕಾಗಿದೆ ಸಂಘದ ಅಭಿವೃದ್ಧಿ ವಿಚಾರಗಳಲ್ಲಿ ಸ್ವ-ಹಿತಾಶಕ್ತಿಗಳಿಗೆ ಅವಕಾಶವಿರಬಾರದು. ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಯ ಚಿಂತನೆ ನಮ್ಮದಾಗಬೇಕು.

ಎರಡು ವರ್ಷಕ್ಕೊಮ್ಮೆ ನಡೆಯುವ ಆಡಳಿತ ಮಂಡಳಿಯ ಆಯ್ಕೆಗೆ ನಡೆಯುವ ಚುನಾವಣೆ ಇತ್ತೀಚಿನ ವರ್ಷಗಳಲ್ಲಿ ಅತಿರೇಕ ಎನ್ನುವಷ್ಟು ನಡೆಯುತ್ತಿರುವುದು ಹಲವು ಹಿರಿಯ ಸದಸ್ಯರುಗಳ ಅಸಮಾಧಾನಕ್ಕೆ ಕಾರಣವಾಗಿದೆ. ಚುನಾವಣೆ ಪ್ರಚಾರದ ವೇಳೆ ನಡೆಯುವ ಪಾರ್ಟಿ, ಸಭೆ, ನಾನಾ ರೀತಿಯ ಓಲೈಕೆಗಳು ಬಂಟರ ಸ್ವಾಭಿಮಾನವನ್ನೇ ಪ್ರಶ್ನಿಸುವಂತಾಗಿವೆ. ಒಂದು ಜಾತಿ ಸಂಘಟನೆ, ಅದರಲ್ಲೂ ಚಾರಿಟೇಬಲ್ ಸಂಸ್ಥೆಗೆ ಈ ಮಟ್ಟದಲ್ಲಿ ಚುನಾವಣೆ ನಡೆಯಬೇಕೇ? ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ಸಂಘಕ್ಕಾಗಿ ದುಡಿದ ಮತ್ತು ಇಡೀ ಸಮಾಜ ಒಂದು ಕುಟುಂಬ ಎಂಬ ತತ್ವದಡಿ ಸಾಗಿ ಬಂದ ನಮ್ಮ ಹಿರಿಯರು ನಮಗೇಕೆ ಮೇಲ್ಪಂಕ್ತಿಯಾಗಬಾರದು?

ಯಾರದೋ ಒತ್ತಾಯಕ್ಕೆ ಮತ್ತು ಪ್ರತಿಷ್ಠೆಗಾಗಿ ಸ್ಪರ್ಧಿಸಿ ಚುನಾವಣೆ ಪ್ರಕ್ರಿಯೆಯನ್ನು ರಂಗೇರಿಸುವುದು ಸಂಘದ ಹಿತದೃಷ್ಟಿಯಿಂದ ಸೂಕ್ತವಾದುದಲ್ಲ. ಸದಸ್ಯರ ನಡುವೆ ಸಾಮರಸ್ಯ ಕದಡುವ ಮತ್ತು ಅಸಮಾಧಾನಕ್ಕೆ ಎಡೆಮಾಡಿ ಕೊಡುವ ವಿದ್ಯಮಾನಗಳು ಸಂಘದ ಬೆಳವಣಿಗೆಗೆ ತಡೆಯಾಗಬಹುದು. ಕೇವಲ ಪದಾಧಿಕಾರಿಗಳಾಗಿಯೇ ಸಮಾಜಸೇವೆ ಮಾಡಬೇಕೆಂಬ ಮನಸ್ಥಿತಿಯಿಂದ ಹೊರಬರಬೇಕಾಗಿದೆ. ಪ್ರಜಾತಂತ್ರ ಮಾದರಿಯ ಆಯ್ಕೆಯನ್ನು ಗೌರವಿಸಬೇಕು. ಆದರೆ ಸಂಘದ ಮೂಲ ಆಶಯ ಮತ್ತು ಘನತೆ ಗೌರವಕ್ಕೆ ಧಕ್ಕೆಯಾಗದಂತೆ ಒಂದು ಚೌಕಟ್ಟಿನೊಳಗೆ ನಮ್ಮ ಚುನಾವಣೆ ನಡೆಯಬೇಕು. ಈ ದಿಸೆಯಲ್ಲಿ ನಾವೆಲ್ಲರೂ ಆತ್ಮಾವಲೋಕನ ಮಾಡಲು ಇದು ಸಕಾಲ.


ಆದಷ್ಟೂ ಸ್ನೇಹಪರ ಮತ್ತು ಸೌಹಾರ್ದಯುತ ರೀತಿಯಲ್ಲಿ ಚುನಾವಣೆ ನಡೆಯುವಂತಾಗಲು ಸಂಘದ ಬಗೆಗೆ ಕಾಳಜಿಯುಳ್ಳ ಹಿರಿಯರು ಮತ್ತು ಪ್ರಜ್ಞಾವಂತ ಮನಸ್ಸುಗಳು ಪ್ರಯತ್ನಶೀಲರಾಗಬೇಕಾದ ಅಗತ್ಯತೆ ನಮ್ಮ ಮುಂದಿದೆ.

ದಿ| ಕೆ. ಶ್ರೀನಿವಾಸ ಆಳ್ವರವರ ದಿವ್ಯಚಿಂತನೆಯ ಫಲವಾಗಿ ಸಂಘ ಮತ್ತು ಸದಸ್ಯರ ಮಧ್ಯೆ ಸೇತುವಾಗಿ ಇಂದು 'ಸ್ನೇಹಚಿಂತನೆ' 25 ವರ್ಷಗಳನ್ನು ಪೂರೈಸಿದೆ. ಸಂಘದ ಕಾರ್ಯಚಟುವಟಿಕೆಗಳ ಮಾಹಿತಿಯ ಜೊತೆಗೆ ಸದಸ್ಯರ ಲೇಖನ, ಬರಹ ಮುಂತಾದುವುಗಳನ್ನು ನಿಮಗೆ ಹೊತ್ತು ತರುವ ಪತ್ರಿಕೆ ಸಂಘದ ಮುಖವಾಣಿಯಾಗಿ ಮಾರ್ಪಟ್ಟಿದೆ. ಸ್ನೇಹಚಿಂತನೆಗೆ ಸಂಪಾದಕರಾಗಿ ಈವರೆಗೆ ಸೇವೆ ಸಲ್ಲಿಸಿದ ಸಮಾಜದ ಹಿರಿಯ ಚಿಂತಕರು ಪತ್ರಿಕೆಗೆ ಇನ್ನಷ್ಟು ಮೆರಗು ನೀಡಿದ್ದಾರೆ. ಅವರು ಮೂಡಿಸಿದ ಹೆಜ್ಜೆ ಗುರುತುಗಳ ಹಾದಿಯಲ್ಲಿ ಸಾಗುವ ಪ್ರಯತ್ನ ಮಾಡುತಿದ್ದೇನೆ. ಎಡವಿದಲ್ಲಿ ತಿದ್ದಿ-ತೀಡಿ ಮುನ್ನಡೆಸುವಿರೆಂದು ನಂಬಿ ಮುಂದಡಿ ಇಟ್ಟಿದ್ದೇನೆ. ಪತ್ರಿಕೆ ಓದುಗರಿಗೆ ಇಷ್ಟವಾಗುವ ನಿಟ್ಟಿನಲ್ಲಿ ಹೊಸ ಅಂಕಣಗಳ ಪರಿಚಯ ಮತ್ತು ಸಾಹಿತ್ಯಾಸಕ್ತಿ ಮೂಡಿಸುವ ಕಾರ್ಯಕ್ರಮಗಳ ಆಯೋಜಿಸುವ ಚಿಂತನೆ ನಮ್ಮದು. ತಮ್ಮೆಲ್ಲರ ಸಹಕಾರ ಮತ್ತು ಸಲಹೆ-ಸೂಚನೆಗಳನ್ನು ಮುಕ್ತವಾಗಿ ಸ್ವಾಗತಿಸುತ್ತೇನೆ.

ನನ್ನಲ್ಲಿ ವಿಶ್ವಾಸವಿರಿಸಿ ಈ ಮಹತ್ತರ ಜವಾಬ್ದಾರಿಯನ್ನು ನೀಡಿದ ಎಲ್ಲಾ ಪದಾಧಿಕಾರಿಗಳಿಗೆ ನಾನು ಆಭಾರಿಯಾಗಿದ್ದೇನೆ. ಕಲಿಕೆ ನಿರಂತರವಾದುದು. ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಅಶೋಕ್ ಕುಮಾರ್ ಶೆಟ್ಟಿಯವರ ಮಾರ್ಗದರ್ಶನದಲ್ಲಿ ಈ ಜವಾಬ್ದಾರಿಯನ್ನು ನಿರ್ವಹಿಸುವ ಆತ್ಮವಿಶ್ವಾಸ ನನ್ನದು.

ವಂದನೆಗಳೊಂದಿಗೆ,

**ರವಿರಾಜ್ ಎಸ್. ಶೆಟ್ಟಿ**



# ಅಧ್ಯಕ್ಷರ ನುಡಿ

ಆತ್ಮೀಯ ಸಮಾಜ ಬಾಂಧವರೇ,

ಪ್ರಥಮದಲ್ಲಿ ಬಂಟರ ಸಂಘದ ಸಂಕೀರ್ಣದ ಅಧಿದೇವತೆ ವರಸಿದ್ಧಿ ವಿನಾಯಕನ ಚರಣ ಕಮಲಗಳಿಗೆ ವಂದಿಸುತ್ತಾ, ನಾವು ನಡೆದು ಬಂದ ದಾರಿಯ ಪಕ್ಷಿನೋಟವನ್ನು ನಯ, ವಿನಯ, ಭಕ್ತಿ ಭಾವಗಳಿಂದ ಸ್ಮರಿಸುತ್ತಾ ದಾನಿಗಳೂ, ಪಾತ್ರಃ ಸ್ಮರಣೀಯರೂ ಆದ ಕೀರ್ತಿಶೇಷ ಶ್ರೀಮತಿ ರಾಧಾಬಾಯಿ ಹಾಗೂ ತಿಮ್ಮಪ್ಪ ಭಂಡಾರಿ ದಂಪತಿಗಳನ್ನು ನೆನಪಿಸುತ್ತಾ ಅನೇಕ ದಾನಿಗಳು, ಪ್ರಮುಖವಾಗಿ ಡಾ।ಆರ್.ಎನ್.ಶೆಟ್ಟಿಯವರು, ಶ್ರೀ ಕೆ.ಪ್ರಕಾಶ್ ಶೆಟ್ಟಿ, ಡಾ। ಬಿ.ಆರ್. ಶೆಟ್ಟಿ, ದಿ. ಸಂಜೀವ ಶೆಟ್ಟಿಯವರು ಜೊತೆಯಲ್ಲಿ ಪ್ರಾರಂಭಿಕ ದಿನಗಳಲ್ಲಿ ಟ್ರಸ್ಟಿಗಳಾಗಿದ್ದ ಶ್ರೀನಿವಾಸ ಆಳ್ವ ಹಾಗೂ ಇತರ ದಾನಿಗಳು, ಗಣ್ಯ ಮಹನೀಯರು ಪ್ರಾರಂಭಿಕ ಹಂತದ ಈ ಸಾಧನೆಗಳಿಗೆ ಅಭಿವೃದ್ಧಿಗೆ ಕಾರಣೀಭೂತರಾದರು. ಈ ಸಂದರ್ಭದಲ್ಲಿ ನಮ್ಮ ಹಿಂದಿನ ನೇತಾರರಾದ ಡಾ। ನರೇಶ್ ಶೆಟ್ಟಿಯವರು ಸಂಘದ ಸಾರಥ್ಯ ವಹಿಸಿದ್ದರು. ಅವರಿಗೂ ನಮ್ಮ ನೆನಹುಗಳು.

ಬಂಟರ ಸಂಘದ ಬೆಳವಣಿಗೆಯ ಪಕ್ಷಿನೋಟದಲ್ಲಿ ಪ್ರಮುಖವಾಗಿ ಶ್ರೀ ಕೆ.ಪಿ.ರಾಮಣ್ಣ ಶೆಟ್ಟರ ಆಕಾಂಕ್ಷೆಯಂತೆ 6 ಮಕ್ಕಳಿಂದ ರಾಮಕೃಷ್ಣ ವಿದ್ಯಾನಿಕೇತನ ಪ್ರಾರಂಭಗೊಂಡು ಕೀರ್ತಿಶೇಷ ಶ್ರೀ ಐ.ಎಂ. ಜಯರಾಮ ಶೆಟ್ಟರ ಅಧ್ಯಕ್ಷೀಯ ಅವಧಿಯಲ್ಲಿ ಶ್ರೇಷ್ಠ ದಾನಿಗಳಾದ ಡಾ।ಆರ್.ಎನ್.ಶೆಟ್ಟಿಯವರ ನೆರವಿನಿಂದ ಹೊಸ ಕಟ್ಟಡದ ನಿರ್ಮಾಣ, ಇಂದು ಕೇವಲ 15 ವರ್ಷಗಳ ಅವಧಿಯಲ್ಲಿ 4000 ಮಕ್ಕಳಿಗೆ ವಿದ್ಯಾದಾನ ಮಾಡುತ್ತಿರುವುದು ಬಂಟರ ಸಮಾಜ ನೀಡಿದ ಕೊಡುಗೆಯಲ್ಲವೇ? ಶಾಲಾ ಕಟ್ಟಡ, ಮಹಿಳಾ ವಸತಿಗೃಹಗಳು ಜಯರಾಮ ಶೆಟ್ಟಿಯವರ ದೂರದೃಷ್ಟಿಗೆ ಸಾಕ್ಷೀಭೂತವಾಗಿ ಅಭಿವೃದ್ಧಿಯ ಪಥದಲ್ಲಿ ಸಂಘ ಸಾಗಿ ಬಂತು. ಅಂದಿನ ದಿನಗಳಲ್ಲಿ ಗೌರವ ಕಾರ್ಯದರ್ಶಿಯಾಗಿ ಶೆಟ್ಟರ ಜೊತೆ, ಕಲೆತ ಬೆರೆತ ಅನುಭವಗಳು ಸದಾ ಸ್ಮರಣೀಯ. ಸಂಕೀರ್ಣದಲ್ಲಿ ದಾನಿಗಳಾದ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರು ಆಡಳಿಯ ಕಛೇರಿಯ ನಿರ್ಮಾಣಕ್ಕೆ ಸಹಾಯ ಹಸ್ತ ನೀಡಿದರು. ಒಟ್ಟಿನಲ್ಲಿ ಸಂಘದ ಅವಶ್ಯಕತೆಗಳಿಗೆ ಸ್ಪಂದಿಸಿದ ಮಹನೀಯರಿಗೆ ನಾವೆಲ್ಲರೂ ಆಭಾರಿಗಳಾಗಿದ್ದೇವೆ.

ಬೆಂಗಳೂರು ಬಂಟರ ಸಂಘದ ಘನತೆ–ಗೌರವಗಳು, ನಮ್ಮ ಕಾರ್ಯಕ್ರಮಗಳನ್ನು ಅನುಕರಣೀಯವಾಗಿಸುವಲ್ಲಿ ನಮ್ಮ ಹಿರಿಯರ ಶಿಸ್ತು, ಆಡಳಿತ ಹಾಗೂ ಪ್ರಾಮಾಣಿಕತೆಯೇ ಪ್ರಮುಖ ಪಾತ್ರ ವಹಿಸಿರುವುದರಲ್ಲಿ ಎರಡು ಮಾತಿಲ್ಲ. ನಾವು ಚಾರಿಟೇಬಲ್ 'ಪದದಡಿ'ಯಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಕೈ ಚಾಚಿದ್ದೇವೆ. ನಮ್ಮದೇ ಆದ ನಿಗದಿತ ಕಾರ್ಯಕ್ರಮಗಳ ಜೊತೆಗೆ, ಉಪಸಮಿತಿಗಳ ಕಾರ್ಯಕ್ರಮಗಳ ಸಂಯೋಜನೆ, ಸಂಕಲದೊಂದಿಗೆ ನಿರಂತರ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ, ಯಾಂತ್ರಿಕ ಬದುಕಿಗೊಂದು ಮಾಂತ್ರಿಕ ಶಕ್ತಿಯನ್ನು ನೀಡಿದ್ದೇವೆ.

ಬೆಂಗಳೂರು ಬಂಟರ ಸಂಘಕ್ಕೆ ಚುನಾವಣೆಗಳು ನಡೆದು ಹೊಸ ಆಡಳಿತ ಮಂಡಳಿಯನ್ನು ಸದಸ್ಯರೇ ನೇರವಾಗಿ ಆಯ್ಕೆ ಮಾಡಿದ್ದೀರಿ. ದೊರೆತ ಅವಕಾಶಕ್ಕೆ ಮತ್ತು ನೀಡಿದ ನಂಬಿಕೆಗೆ ಚ್ಯುತಿ ಬಾರದಂತೆ ಸಂಘವನ್ನು ಮುನ್ನಡೆಸುವಲ್ಲಿ ನಿಮ್ಮೆಲ್ಲರ ಸಹಕಾರ ಅತೀ ಅಗತ್ಯ. ನಿಮ್ಮ ಸಲಹೆ ಸೂಚನೆಗಳಿಗೆ ಮುಕ್ತ ಅವಕಾಶವಿದೆ. ಸಾಮಾನ್ಯವಾಗಿ ನಾವೆಲ್ಲರೂ ಸಂಘದಲ್ಲಿ ಲಭ್ಯವಿರುತ್ತೇವೆ. ನೇರ ಸಂಪರ್ಕಗಳ ಅಥವಾ ದೂರವಾಣಿ ಮುಖೇನ ಸಂಘದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿತ ಸಲಹೆಗಳಿಗೆ ಸದಾ ಸ್ವಾಗತವಿದೆ. ನಮ್ಮ ಯೋಚನೆಗಳು, ಯೋಜನೆಗಳು ಕಾರ್ಯರೂಪಕ್ಕೆ ಬರಬೇಕಾದರೆ, ಸದಸ್ಯರ ಸಹಕಾರ ಅತ್ಯಗತ್ಯ. ಸಂಘದ ಅಭಿವೃದ್ಧಿ ಹಾಗೂ ಪ್ರಗತಿಗೆ ನಾವೆಲ್ಲರೂ ಶ್ರಮಿಸಬೇಕಾಗಿದೆ.

'ಧರ್ಮೋ ರಕ್ಷತಿ, ರಕ್ಷತಃ' ಯಾರು ಧರ್ಮವನ್ನು ಕಾಪಾಡುತ್ತಾನೋ ಅವನನ್ನು ಧರ್ಮ ರಕ್ಷಿಸುತ್ತದೆಯಂತೆ. ಈ ಬಾರಿ ವರಸಿದ್ಧಿ ವಿನಾಯಕ ಮಂದಿರದ ಗಣೇಶೋತ್ಸವ ವಿಜೃಂಭಣೆಯಿಂದ ಜರುಗಿ, ಬಂಟ ಸಮುದಾಯದ ಜೊತೆಗೆ ನಮ್ಮ ಪರಿಸರದ ಜನತೆ ಸೇರಿಕೊಂಡು ಒಂದು ಉತ್ಸವವೇ ನಡೆಯಿತು ಎಂದರೂ ತಪ್ಪಾಗಲಾರದು. ಈ ಸಂದರ್ಭದಲ್ಲಿ ಹಲವಾರು ದಾನಿಗಳು ನಮ್ಮೊಂದಿಗೆ ಕೈಜೋಡಿಸಿದ್ದಾರೆ. 1250 ಕ್ಕೂ ಮಿಕ್ಕಿದ ಭಕ್ತಾದಿಗಳಿಗೆ ಪ್ರಸಾದ ಭೋಜನದ ವ್ಯವಸ್ಥೆಯನ್ನು ಹಲವಾರು ವರ್ಷಗಳಿಂದ ಸೇವಾ ಕೈಂಕರ್ಯ ರೂಪದಲ್ಲಿ ನಡೆಸಿಕೊಡುತ್ತಿರುವ ಶ್ರೀ ಸುಬ್ರಹ್ಮಣ್ಯ ಶೆಟ್ಟಿ ದಂಪತಿಗಳನ್ನು ಅಭಿನಂದಿಸುತ್ತಿದ್ದೇನೆ.

ಹಿರಿಯರ ಪರಿಶ್ರಮದ ಪ್ರತಿರೂಪವಾಗಿ ಸಾಂಘಿಕವಾಗಿ ನಾವಿಂದು ಸಂಘಗಳ ಸಾಲಿನಲ್ಲಿ ಮುಂಚೂಣಿಯಲ್ಲಿದ್ದೇವೆ. ಬಂಧುಗಳೇ, ಕೆಲವೊಂದು ಸಮಸ್ಯೆಗಳು ನಮ್ಮ ಮುಂದಿವೆ. ಅವುಗಳನ್ನೆಲ್ಲ ಬಗೆಹರಿಸುತ್ತಾ ಸಂಘವನ್ನು ಮುನ್ನಡೆಸಲು ನಿಮ್ಮೆಲ್ಲರ ಸಹಕಾರವನ್ನು ನಿರೀಕ್ಷಿಸುತ್ತಿದ್ದೇವೆ.

ಹೃದಯಪೂರ್ವಕ ವಂದನೆಗಳೊಂದಿಗೆ,

**ಚಂದ್ರಹಾಸ ರೈ ಡಿ.**
ಅಧ್ಯಕ್ಷರು

# BUNTS' SANGHA BANGALORE

No. 324, Bunts' Sangha Complex, Chord Road, Vijayanagar, Bangalore – 560 040
Tel: 23399323/ 23399635/636 , Email : info@buntsanghablr.com

## Invites Applications for the following Posts

| Sl.No. | Post | Requirements |
|---|---|---|
| 1 | **Maintenance Manager/ Supervisor** | Graduate with at least 5 years of experience in similar capacity with good communication skill ( Kan,Eng, Hindi) and computer knowledge. Age below 45 years |
| | **ಮೈಂಟೆನೆನ್ಸ್ ಮ್ಯಾನೇಜರ್/ ಸುಪರ್‌ವೈಸರ್** | ಪದವೀಧರ, ತತ್ಸಮಾನ ಹುದ್ದೆಯಲ್ಲಿ ಕನಿಷ್ಟ 5 ವರ್ಷ ಅನುಭವ, ಕಂಪ್ಯೂಟರ್ ಜ್ಞಾನ ಮತ್ತು ಉತ್ತಮ ಸಂವಹನ ಸಾಮರ್ಥ (ಕನ್ನಡ, ಇಂಗ್ಲೀಷ್, ಹಿಂದಿ) ವಯೋಮಿತಿ : 45 ವರ್ಷದ ಒಳಗೆ |
| 2 | **Accountant** | B.com/ M.com with at least 3 years of experience in similar capacity, well versed in Accountancy, Tally and Taxation.<br>Preference for Male candidates |
| | **ಅಕೌಂಟೆಂಟ್** | ಬಿ.ಕಾಂ/ಎಂ.ಕಾಂ. ವಿದ್ಯಾರ್ಹತೆಯೊಂದಿಗೆ ಅಕೌಂಟೆನ್ಸಿ, ಟ್ಯಾಲಿ ಹಾಗೂ ಟ್ಯಾಕ್ಸೇಶನ್‌ನಲ್ಲಿ ಕನಿಷ್ಟ 3 ವರ್ಷಗಳ ಅನುಭವ. ಪುರುಷ ಅಭ್ಯರ್ಥಿಗಳಿಗೆ ಆದ್ಯತೆ |
| 3 | **Receptionist** | Graduate with at least 2 years experience in similar capacity and basic computer knowledge. Knowledge of DTP (Kannada/ English) will be an added advantage. Age below 35 years |
| | **ರಿಸೆಪ್ಷನಿಸ್ಟ್** | ಪದವಿಯೊಂದಿಗೆ ತತ್ಸಮಾನ ಹುದ್ದೆಯಲ್ಲಿ ಕನಿಷ್ಟ 2 ವರ್ಷಗಳ ಅನುಭವ, ಕಂಪ್ಯೂಟರ್ ಹಾಗೂ ಡಿ.ಟಿ.ಪಿ. (ಕನ್ನಡ/ಇಂಗ್ಲೀಷ್) ಅನುಭವವಿರುವ ಅಭ್ಯರ್ಥಿಗಳಿಗೆ ಆದ್ಯತೆ. ವಯೋಮಿತಿ : 35 ವರ್ಷದ ಒಳಗೆ |

**Applications may be forwarded to the Hon. Secretary on or before 23.09.2016**

**SANTHOSH SHETTY J.**
HON. SECRETARY

**CHANDRAHAS RAI. D**
PRESIDENT

**MAMATHA D. SHETTY**
CHAIRPERSON, EMPLOYMENT CELL

# ಗೌರವ ಕಾರ್ಯದರ್ಶಿಗಳ ವರದಿ



ಗೌರವಾನ್ವಿತ ಸದಸ್ಯರೇ,

ದಿನಾಂಕ 04.08.2016 ರಂದು ನಡೆದ ಜಂಟಿ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ 2016–18ನೇ ಸಾಲಿನ ಸಂಘದ ಆಡಳಿತ ನಿರ್ವಹಣೆಯ ಜವಾಬ್ದಾರಿ ವಹಿಸಿಕೊಂಡಿತು. ಸಮಿತಿಯು ದಿನಾಂಕ 10.08.2016 ರಂದು ಪ್ರಥಮ ಕಾರ್ಯಕಾರಿ ಸಮಿತಿ ಸಭೆ ನಡೆಸಿ ಉಪಸಮಿತಿಗಳ ಅಧ್ಯಕ್ಷರ ನೇಮಕಾತಿಯೊಂದಿಗೆ ಸಂಘದ ಕಾರ್ಯ ಚಟುವಟಿಕೆಗಳಿಗೆ ಚಾಲನೆ ನೀಡಲಾಯಿತು. ಆಗಸ್ಟ್ 15 ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ 70ನೇ ಸ್ವಾತಂತ್ರ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಡಿ. ಚಂದ್ರಹಾಸ ರೈಯವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕರ್ನಲ್ ಕುರ್‍ಯೆಕೋಸ್ ಧ್ವಜಾರೋಹಣ ಮಾಡಿದರು. ಗೌರವ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಡಾ। ಮನುಬಳಿಗಾರ್, ಐ.ಎ.ಎಸ್. (ನಿವೃತ್ತ) ಭಾಗವಹಿಸಿದ್ದರು. ಖಜಾಂಚಿ ಶ್ರೀ ಬಿ. ಆನಂದರಾಮ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಂಘದ ಮಾಜಿ ಪದಾಧಿಕಾರಿಗಳು ಉಪಸ್ಥಿತರಿದ್ದರು. ಶೈಕ್ಷಣಿಕ ಹಾಗೂ ಇತರ ಕ್ಷೇತ್ರಗಳಲ್ಲಿ ಅತ್ಯುನ್ನತ ಸಾಧನೆಗೈದ ವಿದ್ಯಾರ್ಥಿಗಳನ್ನು ಸ್ಮರಣಿಕೆಯೊಂದಿಗೆ ಗೌರವಿಸಲಾಯಿತು.

ದಿನಾಂಕ 31.08.2016ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲಾಡಳಿತ ಮಂಡಳಿಯ ಪ್ರಥಮ ಸಭೆಯನ್ನು ಚೇರ್‌ಮೆನ್ ಡಾ। ಆರ್.ಎನ್. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಸಿ ಶಿಕ್ಷಣ ಸಂಸ್ಥೆಯ ಬೆಳ್ಳಿಹಬ್ಬವನ್ನು ಅತ್ಯಂತ ಸಂಭ್ರಮದಿಂದ ಹಾಗೂ ವಿಭಿನ್ನವಾಗಿ ಆಚರಿಸುವ ಬಗ್ಗೆ ತೀರ್ಮಾನಿಸಲಾಯಿತು. ಶಿಕ್ಷಣ ಸಂಸ್ಥೆಯಲ್ಲಿ ಆಡಳಿತ ಸುಧಾರಣೆ ಹಾಗೂ ಶೈಕ್ಷಣಿಕ ಗುಣಮಟ್ಟವನ್ನು ಇನ್ನಷ್ಟು ಮೇಲ್ಮಟ್ಟಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಚರ್ಚಿಸಿ ಕಾರ್ಯ ಯೋಜನೆಯನ್ನು ಕೈಗೊಳ್ಳಲು ನಿರ್ಧರಿಸಲಾಯಿತು.

ಶಿಕ್ಷಣ ಇಲಾಖೆಯು ಶಾಲಾ ವಿದ್ಯಾರ್ಥಿಗಳಿಗೆ ಆಧಾರ್ ಕಾರ್ಡ್ ಕಡ್ಡಾಯಗೊಳಿಸಿರುವುದನ್ನು ಮನಗಂಡ ಸಮಾಜ ಸೇವಾ ಸಮಿತಿಯು ಸಂಘದ ಸಂಕೀರ್ಣದಲ್ಲಿ ದಿನಾಂಕ 30.08.2016 ರಿಂದ 10.09.2016ರವರೆಗೆ ಶಾಲಾ ವಿದ್ಯಾರ್ಥಿಗಳ ಹಾಗೂ ಸಮಾಜ ಬಾಂಧವರ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ 'ಆಧಾರ್ ನೋಂದಣಿ ಕೇಂದ್ರ'ವನ್ನು ಆರಂಭಿಸಿದೆ. ದಿನಾಂಕ 05.09.2016 ರಂದು 'ಗಣೇಶ ಚತುರ್ಥಿ'ಯನ್ನು ಅದ್ದೂರಿಯಾಗಿ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

**ಹಿಂದಿನ ಕಾರ್ಯಕಾರಿ ಸಮಿತಿಯ ಅವಧಿಯಲ್ಲಿ ಅಪೂರ್ಣ ಗೊಂಡಿರುವ ವೆಬ್‌ಸೈಟನ್ನು ಪೂರ್ಣ ಪ್ರಮಾಣದಲ್ಲಿ ಸದಸ್ಯರ ಉಪಯೋಗಕ್ಕೆ ಸಿದ್ಧಗೊಳಿಸುವಲ್ಲಿ ಈಗಾಗಲೇ ಕಾರ್ಯೋನ್ಮುಖ ರಾಗಿದ್ದೇವೆ. ಸ್ಮಾರ್ಟ್‌ಕಾರ್ಡ್ ವಿತರಣೆಯಲ್ಲಿನ ಗೊಂದಲಗಳನ್ನು ಬಗೆಹರಿಸಿ ಸದಸ್ಯರಿಗೆ ಉಚಿತವಾಗಿ ನೀಡುವ ಬಗ್ಗೆ ಹಾಗೂ ಸದಸ್ಯರ ಕೈಪಿಡಿಯನ್ನು ಹೆಚ್ಚು ಸದಸ್ಯರಿಗೆ ಪ್ರಯೋಜನಕಾರಿ ಯಾಗಿ ದೊರಕುವ ನಿಟ್ಟಿನಲ್ಲಿ ರೂ. 250/–ರ ಬದಲಿಗೆ ರೂ. 100/– ರ ದರದಲ್ಲಿ ನೀಡುವ ಕುರಿತಂತೆ ದಿನಾಂಕ 27.08.2016 ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಹತ್ತರವಾದ ತೀರ್ಮಾನ ತೆಗೆದುಕೊಳ್ಳಲಾಯಿತು.**

ಸಂಘಕ್ಕೆ ಖರೀದಿಸಲಾದ ಜಮೀನಿನ ಕಾನೂನು ಸಮಸ್ಯೆಗಳ ಬಗ್ಗೆ ಸಂಘದ ಮುಂದಿರುವ ಎಲ್ಲಾ ಮಾರ್ಗೋಪಾಯಗಳ ಬಗ್ಗೆ ದಾನಿಗಳ ಮತ್ತು ಹಿರಿಯ ಸದಸ್ಯರ ನೇತೃತ್ವದಲ್ಲಿ 'ಯೋಜನಾ ಸಮಿತಿ'ಯು ಕಾರ್ಯೋನ್ಮುಖವಾಗಿದ್ದು ಅಂತಿಮ ತೀರ್ಮಾನಕ್ಕಾಗಿ ಆದಷ್ಟು ಶೀಘ್ರದಲ್ಲಿ ಸರ್ವಸದಸ್ಯರ ತುರ್ತು ಮಹಾಸಭೆಯನ್ನು ಕರೆಯಲಾಗುವುದು. ಈ ಎಲ್ಲಾ ವಿಚಾರಗಳಲ್ಲಿ ಸರ್ವ ಸದಸ್ಯರು ಮುಕ್ತ ಸಲಹೆ–ಸೂಚನೆಗಳನ್ನು ನೀಡಿ ಸಂಘವನ್ನು ಮುನ್ನಡೆಸುವಲ್ಲಿ ಸಹಕರಿಸಿ ಮಾರ್ಗದರ್ಶನ ನೀಡಬೇಕಾಗಿ ವಿನಂತಿ.

ವಂದನೆಗಳೊಂದಿಗೆ,

**ಸಂತೋಷ್ ಶೆಟ್ಟಿ ಜೆ.**
ಗೌರವ ಕಾರ್ಯದರ್ಶಿ

# ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ 70ನೇ ಸ್ವಾತಂತ್ರ್ಯೋತ್ಸವ


"ನಾವು ಸ್ವಾತಂತ್ರ್ಯದ ಗಾಳಿಯನ್ನು ಉಸಿರಾಡಲು ತಮ್ಮ ಜೀವ ತೆತ್ತವರನ್ನು ನೆನೆಯೋಣ. ಅಭಿವೃದ್ಧಿಯ ಪಥದಲ್ಲಿ ಒಟ್ಟಾಗಿ ಏಕತೆಯೊಂದಿಗೆ ರಾಷ್ಟ್ರವನ್ನು ಕಟ್ಟೋಣ".

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ 70 ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಧ್ವಜಾರೋಹಣವನ್ನು ಮಾಡಿದ ನಂತರ ರಾಷ್ಟ್ರಗೀತೆ ಮೊಳಗಿತು. ಪಥ ಸಂಚಲನ ನೆರೆದಿರುವ ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿತು. ಪ್ರಾಂಶುಪಾಲರಾದ ಶ್ರೀ ಎನ್.ಎಸ್. ನಾಗೇಶ್‌ರವರು ಆಗಮಿಸಿರುವ ಅತಿಥಿಗಳಿಗೆ ಸ್ವಾಗತವನ್ನು ಕೋರಿದರು. 'ವಿದ್ಯಾರ್ಥಿಗಳಿಂದ ವಿದ್ಯಾರ್ಥಿಗಳಿಗಾಗಿ' ಸಂದೇಶ ವೆಂಬಂತೆ ರಾಷ್ಟ್ರೀಯ ದಿನದ ಮಹತ್ವವನ್ನು ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಯುವ ಜನಾಂಗದ ಜವಬ್ದಾರಿಯನ್ನು ಮನಮುಟ್ಟುವಂತೆ ತಮ್ಮ ಮಾತಿನಲ್ಲಿ ವ್ಯಕ್ತಪಡಿಸಿದರು .

ದೇಶಪ್ರೇಮ, ಹುತಾತ್ಮರು ಬಿಟ್ಟು ಹೋಗಿರುವ ಶ್ರೀಮಂತ ಪರಂಪರೆಯನ್ನು ಮುಂದಿನ ಪೀಳಿಗೆಗೆ ಸಾಗಿಸುವುದಕ್ಕಾಗಿ ಸಂದೇಶವನ್ನು ನೀಡಲು ಬಂದಿರುವ ಮುಖ್ಯ ಅತಿಥಿ ಕರ್ನಲ್ ಕುರ್ಯೆಕೋಸೆರವರು. ಅವರು ತನ್ನ ಸಿಯಾಚಿನ್ ಅನುಭವ ಮತ್ತು ವಿದ್ಯಾರ್ಥಿಗಳಿಗೆ ಐತಿಹಾಸಿಕ ಮಹತ್ವವನ್ನು ವಿವರಿಸಿದರು. ಗೌರವ ಅತಿಥಿಯಾಗಿ ಉಪಸ್ಥಿತರಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ। ಮನುಬಳಿಗಾರ್ ಅವರು 'ನಾಡು ನಮ್ಮದು ಎಂಬ ಮನೋಭಾವವಿದ್ದರೆ ದೇಶ ನಮ್ಮದು, ದೇಶಕ್ಕಾಗಿ ಹೋರಾಡುವ ಮನೋಭಾವವನ್ನು ಬೆಳೆಸಲು ಸಾಧ್ಯ'. ಎಂಬ ಸಂದೇಶವನ್ನು ನೀಡಿದರು.

ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಡಿ. ಚಂದ್ರಹಾಸ ರೈಯವರು ವಿದ್ಯಾರ್ಥಿಗಳಿಗೆ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡು ಸತ್ಪ್ರಜೆಯಾಗಬೇಕೆಂದು ಮತ್ತು ಪ್ರತಿದಿನ ವಿದ್ಯಾರ್ಥಿಗಳು ಸನ್ನಡತೆಯಿಂದ ಕೂಡಿ ರಾಷ್ಟ್ರದ ಏಳಿಗೆಗೆ ದುಡಿಯಬೇಕೆಂಬ ಕರೆ ಇತ್ತರು. ಬಂಟರ ಸಂಘದ ಕಾರ್ಯದರ್ಶಿ ಶ್ರೀ ಸಂತೋಷ ಶೆಟ್ಟಿ ಜೆ ಮತ್ತು ಸಂಘದ ಖಜಾಂಚಿಗಳಾದ ಶ್ರೀ ಆನಂದ್‌ರಾವ್ ಶೆಟ್ಟಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ರಾಷ್ಟ್ರ ಪುರಸ್ಕಾರ ಪಡೆದ ಸ್ಕೌಟ್ ಗೈಡು ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು. ಪದವಿ ಪೂರ್ವ ಮತ್ತು ಹತ್ತನೇ ತರಗತಿಯಲ್ಲಿ ಶೇಕಡ 90 ಹಾಗೂ ಹೆಚ್ಚಿನ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ವೈವಿಧ್ಯತೆಯಿಂದ ಕೂಡಿದ ದೇಶದ ಮೌಲ್ಯಗಳ ಪಾಲನೆ ಘೋಷಣೆಯನ್ನು ಎತ್ತಿ ತೋರಿಸುವಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಮೂಡಿಬಂದವು ಎಲ್ಲರ ಮನ ಮನಸ್ಸಿನಲ್ಲಿ ವಂದೇ ಮಾತರಂ . . . . ಗುನುಗುನುಗಿಸುತ್ತಿತ್ತು .





# ಮಹಿಳಾ ವಿಭಾಗ

## 'ದಸರಾ ಆಚರಣೆ'

**ದಿನಾಂಕ : 01.10.2016, ಶನಿವಾರ, ಮಧ್ಯಾಹ್ನ 2.00 ರಿಂದ**

## ಕಾರ್ಯಕ್ರಮ

- **ದೇವಿ ಪೂಜೆ**
- **ಲಲಿತಾ ಸಹಸ್ರನಾಮ**
- **ಸತ್ಸಂಗ** – ಆರ್ಟ್ ಆಫ್ ಲಿವಿಂಗ್‌ನ ಶ್ರೀ ಪ್ರತಾಪ್ ಮತ್ತು ಸಂಗಡಿಗರಿಂದ
- **ನೃತ್ಯ ರೂಪಕ** – ಕುಮಾರಿ ದಿಶಾ ಮತ್ತು ತಂಡದವರಿಂದ
- **ದಾಂಡಿಯಾ ನೃತ್ಯ** – ಸಂಘದ ಸದಸ್ಯೆಯರಿಂದ

**ಸದಸ್ಯೆಯರೆಲ್ಲರೂ ತಮ್ಮ ಬಂಧು-ಬಾಂಧವರೊಡಗೂಡಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ**

**ಸಂತೋಷ್ ಶೆಟ್ಟಿ ಜೆ.**
ಗೌ। ಕಾರ್ಯದರ್ಶಿ

**ಚಂದ್ರಹಾಸ ರೈ. ಡಿ.**
ಅಧ್ಯಕ್ಷರು

**ಮಾಲತಿ ಜೆ. ಶೆಟ್ಟಿ**
ಸಂಚಾಲಕಿ, ಮಹಿಳಾ ವಿಭಾಗ
ಮೊ: 9481776303

**ಅಮೃತಾ ಎಸ್. ಶೆಟ್ಟಿ**
ಚೇರ್‌ಪರ್ಸನ್, ಮಹಿಳಾ ವಿಭಾಗ
ಮೊ: 8884255922

ಡ್ರೆಸ್‌ಕೋಡ್ : ಗುಲಾಬಿ ಮತ್ತು ಕೆಂಪು (pink & red)

## ಸಂಘದ ನೂತನ ಅಧ್ಯಕ್ಷರಿಗೆ ಅಭಿನಂದನೆ

ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತದ ನಿರ್ದೇಶಕರಾದ **ಶ್ರೀ ಡಿ. ಚಂದ್ರಹಾಸ್ ರೈ**ಯವರು ಬೆಂಗಳೂರು ಬಂಟರ ಸಂಘದ 2016-18 ನೇ ಸಾಲಿನ ಅಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ **ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ**ಯವರು ದಿನಾಂಕ 07-08-2016ರಂದು ಸಹಕಾರಿಯ ಕಛೇರಿಯಲ್ಲಿ ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ಸನ್ಮಾನಿಸಿದರು.



# ಸಂಪನ್ನ ಪ್ರಾರ್ಥನೆ



**ನಾಗರಮಠ ಜಯರಾಮ ಶೆಟ್ಟಿ**
ಪ್ರಾಧ್ಯಾಪಕ,
ನಿಟ್ಟೆ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್,
ಬೆಂಗಳೂರು

ಪ್ರಾರ್ಥನೆ ದೇಹ ಮತ್ತು ಮನಸ್ಸನ್ನು ಜೋಡಿಸುವ ಪವಾಡ ಶಕ್ತಿ. ನಮ್ಮೆಲ್ಲ ಪ್ರಯತ್ನಗಳು ಏಕಮುಖಿಯಾಗಿ ಗುರಿಯತ್ತ ಸಾಗಬೇಕಾದರೆ ಆಂತರಿಕವಾಗಿ ಶಕ್ತಿಯು ಉದ್ದೀಪನವಾಗಬೇಕು. ಚದುರಿದ ಮನಸ್ಸು, ತಲ್ಲಣಗೊಂಡ ಮನಸ್ಸು ನಮ್ಮನ್ನು ದ್ವಂದ್ವಕ್ಕೆ ಒಳಪಡಿಸಿ ಛಲವೆಂಬ ಶಕ್ತಿಯನ್ನು ಉಡುಗಿಸುತ್ತದೆ. ಪ್ರಾರ್ಥನೆಯ ಮೂಲಕ ನಮ್ಮ ಬುದ್ಧಿಶಕ್ತಿ, ಇಚ್ಛಾಶಕ್ತಿ ಮತ್ತು ಕಾರ್ಯಶಕ್ತಿಯು ಸಮರ್ಥನೆಗೊಂಡಾಗ ಸಾಧನೆ ಸಿದ್ಧಿಯಾಗುವುದರಲ್ಲಿ ಸಂದೇಹವಿಲ್ಲ. ಪ್ರಾರ್ಥನೆಯೆಂದರೆ ಕೈಕಟ್ಟಿ ಕುಳಿತು, ಅಸಹಾಯಕತನ ತೋರಿಸುವುದಲ್ಲ. ಶಕ್ತರು, ಸಾಧಕರು, ಸಾಹಸಿಗಳಲ್ಲಿ ಪ್ರಾರ್ಥನಾ ಶಕ್ತಿಯನ್ನು ಗುರುತಿಸಬಹುದು. ಪ್ರಾರ್ಥನೆ ಒಂದು ನೀರಸ, ಅರ್ಥಹೀನ ಕ್ರಿಯೆಯೆಂದು ತಿಳಿಯಬಾರದು. "ನಾನೆಲ್ಲ ಪ್ರಯತ್ನಗಳನ್ನು ಶಕ್ತಿಮೀರಿ ಮಾಡಿಯಾಗಿದೆ ಇನ್ನು ಪ್ರಾರ್ಥನೆಯೊಂದೇ ನನಗೆ ಮಂದಿನ ದಾರಿ" ಎಂದು ಯಾರಾದರೂ ನಿಮ್ಮಲ್ಲಿ ಹೇಳಿಕೊಂಡರೆ ದಯವಿಟ್ಟು ಅವರನ್ನು ಸೋಮಾರಿ ಅಥವಾ ಪುಕ್ಕಲು ಎಂದು ಅರ್ಥೈಸದಿರಿ. ಪ್ರಾರ್ಥನೆ ಪ್ರಯತ್ನಗಳಿಗೆಲ್ಲ ಹೊಸ ಆಯಾಮಗಳನ್ನು ಕರುಣಿಸುವ ನಿಯಾಮಕ. ಎಡಿಸನ್ ವಿನ್ಯಾಸಗೊಳಿಸಿದ್ದ ಬಲ್ಬ್ 9999 ಬಾರಿ ಬೆಳಕನ್ನು ತರಲಿಲ್ಲ, ವಿಜಯ ಸಮಾರಂಭದಲ್ಲಿ ಮಿತ್ರರೊಬ್ಬರು ಎಡಿಸನ್ ಕುರಿತು ಈ ರೀತಿ ಕೇಳಿದರಂತೆ,' 9999 ಬಾರಿ ಸಲ ಸೋತಾಗ ನಿಮಗೆ ಹೇಗೆ ಅನ್ನಿಸಿರಬಹುದು?'. ಎಡಿಸನ್ ಮಹಾಶಯ ಉತ್ತರಿಸಿದ ರೀತಿ ಎಲ್ಲರನ್ನು ಚಕಿತಗೊಳಿಸಿತ್ತು. '9999 ಬಾರಿ ಬಲ್ಬನ್ನು ತಪ್ಪಾಗಿ ವಿನ್ಯಾಸಗೊಳಿಸುವ ಮಹಾ ಪಾಠವನ್ನು ಕಲಿಯುವ ಅವಕಾಶ ಸಿಕ್ಕಿರುವಾಗ ಅದನ್ನು ಸೋಲು ಎಂದು ನಾನು ಹೇಗೆ ತಿಳಿಯಬಹುದು?. ಇಂತಹ ಗೆಲ್ಲುವವರ ಮನೋಭಾವದಲ್ಲಿ ಪ್ರಾರ್ಥನಾ ಭಾವ ಹಾಸುಹೊಕ್ಕಾಗಿರುವುದನ್ನು ಗಮನಿಸಿ. ಸೋಲುಗಳನ್ನು ಗೆಲುವಿನ ಸೋಪಾನಗಳಂತೆ ತಿಳಿಯುವುದೇ ಪ್ರಾರ್ಥನೆ. ಪ್ರಾರ್ಥನೆಯಲ್ಲಿ ಪ್ರಯತ್ನಶೀಲತೆ, ಕಾರ್ಯಚತುರತೆ ಅಡಕವಾಗಿರಲೇ ಬೇಕಿಲ್ಲ. ಇದನ್ನು ಸಂಪನ್ನ ಪ್ರಾರ್ಥನೆ (Dynamic Prayer) ಎಂದು ಕರೆಯಬಹುದೇನೊ.

ಮನೋವಿಜ್ಞಾನಿಯೊಬ್ಬರು ಮೂರು ಕಲ್ಲುಕುಟ್ಟಿಗರನ್ನು ಕೇಳಿದ ಪ್ರಶ್ನೆಯೊಂದೆ, 'ನೀವು ಈಗ ಏನನ್ನು ಮಾಡುತ್ತಿರುವಿರಿ?'. ಮೊದಲನೆಯ ವ್ಯಕ್ತಿ ಸಿಡಿಮಿಡಿಗೊಂಡು, ಸಿಟ್ಟಿನ ಭರದಲ್ಲಿ ಉತ್ತರಿಸುವ ರೀತಿ ನೋಡಿ' ನೀವೇನು ಕುರುಡರೆ... ಕಣ್ಣು ಕಾಣಿಸುವುದಿಲ್ಲವೆ?... ಈ ಪಾಪಿ ಹೊಟ್ಟೆಗಾಗಿ ಕಲ್ಲನ್ನು ಕುಟ್ಟುತ್ತಿರುವುದು'. ಎರಡನೆಯ ವ್ಯಕ್ತಿ ಕೊಟ್ಟ ಉತ್ತರ 'ಸ್ವಾಮಿ ನಾನು ಈ ಕ್ಷೇತ್ರದ ಅತ್ಯಂತ ಹೆಸರುವಾಸಿ ಕಲ್ಲುಕುಟ್ಟಿಗ... ನನಗೆ ಅದೆಷ್ಟೋ ಬಹುಮಾನಗಳು ಬಂದಿವೆ'. ಮೂರನೇ ಕಲ್ಲುಕುಟ್ಟಿಗನ ಉತ್ತರ ಮನೋವಿಜ್ಞಾನಿಯ ಮನಸೆಳೆದಿತ್ತು. 'ಮಹಾಶಯರೆ... ನಾನು ಒಂದು ದೇವಾಲಯ ಕಟ್ಟುವ ಘನಕಾರ್ಯದಲ್ಲಿ ನಿರತನಾಗಿದ್ದೇನೆ... ತಮಗೆ ನನ್ನಿಂದ ಏನಾಗಬೇಕಾಗಿತ್ತು?'. ಮೂರನೆಯ ವ್ಯಕ್ತಿಯ ಉತ್ತರದ ಎತ್ತರ ಗಮನಿಸಿ. ನಮ್ಮ ಕೆಲಸದ ಸಾಕಾರತೆಯನ್ನು ಕ್ಷಣ ಕ್ಷಣಕ್ಕೂ ಕಾಣುವುದೇ ಪ್ರಾರ್ಥನೆ. ಕಾಯಕವೇ ಕೈಲಾಸವೆಂದು ಬಸವಣ್ಣನವರು ಸಾರಿದ್ದು ಇದನ್ನೇ ತಾನೆ? ಕುಂತಾಗ, ನಿಂತಾಗ, ನಡೆದಾಡುವಾಗ, ಕೆಲಸಗಳಲ್ಲಿ ನಿರತರಾಗಿರುವಾಗಲೂ ಪ್ರಾರ್ಥನೆ ಸಾಧ್ಯ. ಪ್ರಾರ್ಥನೆ ಒಂದು ಚಟುವಟಿಕೆಯಾದರೆ, ಪ್ರಾರ್ಥನಾ ಮನೋಭಾವ ಆಚರಣೆಗೆ ತರುವ ಧರ್ಮದಂತೆ.

**ಪ್ರಾರ್ಥನೆ ಮತ್ತು ಸಮಸ್ಯೆ**

ಪ್ರಾರ್ಥನಾಶಕ್ತಿ ನಮ್ಮ ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು ನಿರ್ಣಯಿಸುತ್ತದೆ. ಅಣುಶಕ್ತಿಯನ್ನು ಬಿಡುಗಡೆಗೊಳಿಸುವ ವೈಜ್ಞಾನಿಕ ತಂತ್ರಜ್ಞಾನ ಹೇಗೋ, ಉತ್ಸಾಹ ಮತ್ತು ಚೈತನ್ಯದ ಚಿಲುಮೆಗಳನ್ನು ಚಿಮ್ಮಿಸುವ ಶಕ್ತಿ ಪ್ರಾರ್ಥನೆಯಲ್ಲಿದೆ. ಪ್ರಾರ್ಥನೆ ನಮ್ಮಲ್ಲಿ ಸಕಾರಾತ್ಮಕ ಮನೋಭಾವಗಳನ್ನು ಅರಳಿಸುತ್ತದೆ. ತನ್ನೆಲ್ಲ ಪ್ರಯತ್ನಗಳನ್ನು ಅಚ್ಚುಕಟ್ಟಾಗಿ ನಡೆಸಿ ಒಂದು ಹಂತದಲ್ಲಿ ವೈದ್ಯರು ಹೀಗೆ ಹೇಳಬಹುದು ' ನೋಡಿ... ನಾನು ಏನೆಲ್ಲ ಮಾಡಬೇಕೊ ಅದೆಲ್ಲ ಮಾಡಿಯಾಗಿದೆ... ಆದರೂ ಈ ರೋಗಿ ಪ್ರತಿಕ್ರಿಯಿಸುತ್ತಿಲ್ಲ ... ಈಗ ನಾವು ಪ್ರಾರ್ಥಿಸುವ 'Let us pray'. ಇಲ್ಲಿಯೂ ಪ್ರಾರ್ಥನಾ ಶಕ್ತಿಯನ್ನು ವೈದ್ಯಕೀಯ ಶಾಸ್ತ್ರ ಗಮನಿಸಿದಂತಿದೆ. ಯಾವುದೇ ಫಲಿತಾಂಶ, ನಿರೀಕ್ಷೆಯನ್ನು 'ಕ್ಷಣಗಣನೆ' ಎಂದು ಕೊನೆಯಹಂತದಲ್ಲಿ ನಾವು ಕರೆಯುತ್ತೇವೆ. ಇತರರಿಂದ ವಿಶೇಷ ರೀತಿಯ ಸಹಾಯ ಸಿಕ್ಕಾಗ, ಮಹತ್ಸಾಧನೆಯ ಅನುಭವವಾದಾಗ ನಾವು ತನ್ಮಯತೆಯಿಂದ,

ಧನ್ಯತೆಯಿಂದ ಮುಟ್ಟಿಕೊಳ್ಳುವ ಭಾಗ ಹೃದಯ, ತಲೆಯಲ್ಲವಲ್ಲ! ಇದು ಪ್ರಾರ್ಥನೆಯ ಒಂದು ತುಣುಕು ಮಾತ್ರ, ದೈನಂದಿನ ಪ್ರಾರ್ಥನೆಯಲ್ಲಿ ನಾವು ವಿಸ್ತೃತವಾಗಿ, ತಲ್ಲೀನರಾಗಿ, ಧನ್ಯತಾಭಾವವನ್ನು ಬೆಳೆಸಿಕೊಳ್ಳುವುದು ಸಾಧ್ಯ.

ಪ್ರಾರ್ಥನಾಶಕ್ತಿ ನಮ್ಮ ದೇಹ ಮತ್ತು ಮನಸ್ಸನ್ನು ತುಂಬಿಕೊಳ್ಳುತ್ತದೆ. ನಿಯಮಿತವಾಗಿ ಪ್ರಾರ್ಥನೆಯನ್ನು ನಡೆಸುವವರ ಯೌವನ ಎಂದೂ ಕುಂದದಂತೆ, ಮುದಿತನವನ್ನು ಮುಂದೂಡುವ ರಹಸ್ಯ ಇದರಲ್ಲಿ ಅಡಗಿದೆ. ಮೂಲಭೂತ ಚೈತನ್ಯ ಶಕ್ತಿ ಪ್ರಾರ್ಥನಾ ಶಕ್ತಿಯ ಮೂಲಕ ರೂಢಿಸಿಕೊಂಡು ಉಳಿಸಿಕೊಳ್ಳುವುದು ಸಾಧ್ಯ. ಪ್ರತಿ ಸಂಜೆ ಮತ್ತು ಬೆಳಗ್ಗೆ ಸಮಯದಲ್ಲಿ ಪಾರ್ಥನೆಯನ್ನು ಮರೆಯದೆ ಮುಂದುವರಿಸಿ. ನಿಮ್ಮ ಲವಲವಿಕೆ ಪ್ರತಿ ಕ್ಷಣದಲ್ಲೂ ಒಡನಾಡಿಯಾಗಿರಲು ಪ್ರಾರ್ಥನಾ ಶಕ್ತಿಯೇ ಕಾರಣ.

ಸಮಸ್ಯೆಗಳ ಆಯುಷ್ಯ ಕಡಿಮೆ. ಸಮಸ್ಯೆಯ ಯಾವುದೋ ಒಂದು ಎಳೆಯನ್ನು ಹಿಡಿದು ಜಗ್ಗಿದಾಗ 'ಗಂಟು' ಬಿಚ್ಚಿಕೊಳ್ಳುತ್ತದೆ. ಆ ಎಳೆಯನ್ನು ಹುಡುಕುವ 'ಮನಸ್ಸು' ಪ್ರಾರ್ಥನಾ ಸಮಯದಲ್ಲಿ ಸೂಚನೆಯ ರೂಪದಲ್ಲಿ ವ್ಯಕ್ತವಾಗುವ ಪವಾಡವನ್ನು ನೀವೇ ಕಂಡುಕೊಳ್ಳುವಿರಿ. ಪಾರ್ಥನಾಶಕ್ತಿ ಪಾದರಸದಂತೆ ಸುಪ್ತ ಮನಸ್ಸಿಗೆ ಹರಿದಾಗ, ನಿಮ್ಮಲ್ಲಿ ಹೊಸ ಶಕ್ತಿಯ ಬಿಡುಗಡೆಯಾಗುವ ಉತ್ಸವಕ್ಕೆ ನೀವೇ ಸಾಕ್ಷಿಯಾಗುವಿರಿ. ಇದಕ್ಕಿಂತ ಪರಮಸುಖ, ಸಾಧನಾನುಭವ ಸ್ಥಿತಿ ಬೇರೆಲ್ಲಿ ಸಿಕ್ಕೀತು? ಇಂತಹ ಅಪರೂಪದ ಸ್ಥಿತಿಯನ್ನು ರಸೋವೈಸಹ ಅಂದು ಕೊಂಡಾಡಿದ್ದಾರೆ.

**ಪ್ರಾರ್ಥನೆ: ಹತ್ತು ಸೂತ್ರಗಳು**

1. ದಿನದ ನಿರ್ದಿಷ್ಟ ಸಮಯವನ್ನು ಪಾರ್ಥನೆಗಾಗಿಯೇ ಮೀಸಲಿಡಿ. ಸಾಧ್ಯವಾದಷ್ಟು ಪ್ರಾರ್ಥನೆಯ ಜಾಗ ಮತ್ತು ಸಮಯ ಪೂರ್ವನಿಗದಿತವಾಗಿರಲಿ. ಸಮಯ ಮತ್ತು ಸ್ಥಳ ನಿಮ್ಮನ್ನು ಸೆಳೆಯುವಂತಿರಲಿ. ವಾಹನ ಚಾಲಕ ತನ್ನ ಸಮವಸ್ತ್ರ ಧರಿಸಿ ಚಾಲಕ ಪೀಠಕ್ಕೆ ಬಂದೊಡನೆ ಅವನಲ್ಲಿ ಅವತರಿಸುವ ಶಿಸ್ತು ಪ್ರಜ್ಞೆ, ಅಚ್ಚುಕಟ್ಟಿನ ಚಟುವಟಿಕೆಗಳನ್ನು ಗಮನಿಸಿ. ನೀವೂ ಕೂಡಾ ನಿಮ್ಮ ಪ್ರಾರ್ಥನಾ ಪೀಠಕ್ಕೆ ಬಂದಾಗ ಹೊಸ ವ್ಯಕ್ತಿತ್ವವನ್ನು ಆಲಿಂಗಿಸುವಿರಿ. ಶಿಸ್ತಿನಲ್ಲಿ ಸುಸ್ತಿಲ್ಲ , ತಡವಿಲ್ಲ.
2. ಪ್ರಾರ್ಥನೆಗೆ ಭಾಷೆ, ಸಾಹಿತ್ಯದ ಅಗತ್ಯವಿಲ್ಲ. ನೇರವಾಗಿ, ಸರಳವಾಗಿ ಭಾವಗಳನ್ನೋ, ಅನಿಸಿಕೆಗಳನ್ನೊ ಹೇಳಿಕೊಳ್ಳ ಬಹುದು. ನಿಮ್ಮ ಯಾವುದೇ ಭಾಷೆಯನ್ನು 'ನಿಮ್ಮ ದೇವರು' ಕೇಳಿಸಿಕೊಳ್ಳುತ್ತಾನೆ.
3. ನಿರ್ದಿಷ್ಟ ಸ್ಥಳ ಮತ್ತು ಸಮಯವನ್ನು ಮೀರಿ ಹೋದರೆ ಇನ್ನೂ ಉತ್ತಮ. ಅರ್ಧ ಗಂಟೆ ಪ್ರಾರ್ಥನೆ ಮತ್ತು 23 ವರೆ ಘಂಟೆ ಪ್ರಾರ್ಥನಾ ಮನೋಭಾವ ದಲ್ಲಿರಲು ಸಾಧ್ಯ (ನಿದ್ರೆಯೂ ಸೇರಿದಂತೆ!)
4. ಪ್ರಾರ್ಥನೆಯಲ್ಲಿ ಬೇಡಿಕೆಗಳು ಗೌಣ. ಪ್ರಾರ್ಥಿಸು ವುದು ಅನುಕೂಲ/ಅವಕಾಶಗಳನ್ನು ಬೇಡುವ ಪ್ರಕ್ರಿಯೆಯಲ್ಲ. ದೇವರು ಇಲ್ಲಿಯತನಕ ನಮಗೆ ಕೊಟ್ಟಿದ್ದಕ್ಕೆ ಧನ್ಯವಾದ ಅರ್ಪಿಸಲು ಜೀವಮಾನವೇ ಕಡಿಮೆಯಾದೀತು. ಪ್ರಾರ್ಥನೆಯಲ್ಲಿ ಸಮರ್ಪಣೆ ಮುಖ್ಯ.
5. ಪ್ರಾರ್ಥನೆಯಲ್ಲಿ ನಂಬುಗೆ ಮುಖ್ಯ ಹೆಜ್ಜೆ. ಇಲ್ಲಿ ನೀವು ಕೇಳಿದ್ದಕ್ಕೆ ಉತ್ತರ ಸಿಕ್ಕೀತು, ಬಯಸಿದ್ದು ಕಂಡೀತು, ಕರೆಗೆ ಬಾಗಿಲು ತೆರೆದೀತು!
6. ಪ್ರಾರ್ಥನೆಯಲ್ಲಿ ನಕರಾತ್ಮಕ ಕರೆಗಳಿಗೆ, ಸಂದೇಶ ಗಳಿಗೆ ಅವಕಾಶವಿಲ್ಲ. 'ಉದಾರ ಚರಿತನಾಂತು ವಸುಧೈವ ಕುಟುಂಬಕಂ' ಎನ್ನುವ ಮಾತಿನಂತೆ ವಿಶ್ವಕ್ಕೆ ಒಳ್ಳೆಯದನ್ನು ಹಾರೈಸುವ ಉದಾರ ಮನಸ್ಸಿನ ಶಕ್ತಿ ನಮ್ಮನ್ನು ಅನುಗ್ರಹಿಸದೇ?
7. 'ಬೇಕಾದುದನ್ನು ಕೇಳು, ಕೊಟ್ಟಿದ್ದನ್ನು ಪ್ರೀತಿಯಿಂದ ಸ್ವೀಕರಿಸು'. ಅದೆಷ್ಟೊ ಹೊತ್ತು ಟೊಂಗೆಯ ಮೇಲೆ ಕುಳಿತಿದ್ದ ಹಕ್ಕಿ ಒಮ್ಮೆಲೆ ಸರಕ್ಕನೆ ಹಾರಿ ಹೋಗುವ ರೀತಿಯಲ್ಲಿ ನಾವು ಮನಸ್ಸನ್ನು ಹದಗೊಳಿಸಿ, ಏನನ್ನೂ ಪಡೆಯದಿದ್ದರೂ ಎಲ್ಲವನ್ನು ಹೊಂದಿದವರಂತೆ ಅನುಭವಿಸುವುದೇ ಪ್ರಾರ್ಥನೆ.
8. ಪ್ರಾರ್ಥನಾ ಸಮಯದಲ್ಲಿ ಉಸಿರಾಟವನ್ನು ಗಮನಿಸುತ್ತಿರಿ. ಉಸಿರಾಟದ ಕಡೆ ಗಮನವಿಪ್ಪರಷ್ಟೆ ಸಾಕು, ಯಾವುದೇ ನಿಯಂತ್ರಣ ಬೇಕಿಲ್ಲ. ನಮ್ಮ ಮೂಲಭೂತ ಆತಂಕ, ಮಾನಸಿಕ ಜಟಿಲತೆಗೆ ಉಸಿರಾಟ ಕ್ರಮವೇ ಪರಿಹಾರ. ಪ್ರಾರ್ಥನಾ ಸಮಯದಲ್ಲಿ ಇಂತಹ ಪರಿಹಾರ ಹೇರಳವಾಗಿ ದೊರಕೀತು.
9. ಮುಖದಲ್ಲಿ ಪ್ರಸನ್ನತೆ ತುಂಬಿರಲಿ. ಖಿನ್ನ ಮನಸ್ಕತೆಯಿಂದ, ಹತಾಶ ಮನೋಭಾವದಿಂದ, ಏಕತಾನತೆಯಿಂದ ಪ್ರಾರ್ಥನಾ ಶಕ್ತಿ ಕುಂದುವುದು.
10. ಪ್ರಾರ್ಥನಾ ಸಮಯದಲ್ಲಿ ಗೋಚರವಾಗುವ ವಿಚಾರ, ಸಂದೇಶಗಳನ್ನು ಉಪೇಕ್ಷಿಸದೆ ಬರೆದಿಡಿ. ಮಹಾನ್ ಸಾಧಕರು, ಸಂತರು ಇಂತಹ ಸೂಚನೆಗಳ ಜಾಡು ಹಿಡಿದು ಸಾಧಿಸಿದ್ದಾರೆ.

# ಧರ್ಮ ಮತ್ತು ಆಧ್ಯಾತ್ಮ



ಕೆ. ಪ್ರಫುಲ್ಲಚಂದ್ರ ಶೆಟ್ಟಿ

ಜಗತ್ತಿನಲ್ಲಿ ಹಲವು ಜಾತಿ, ಧರ್ಮ, ಮತ, ಪಂಥಗಳಿವೆ. ವಿಭಿನ್ನ ಸಂಸ್ಕೃತಿಗಳಿವೆ. ನಾವು ಇಂತಹದ್ದೆ ಜಾತಿ, ಧರ್ಮ ಅಥವಾ ದೇಶದಲ್ಲಿ ಜನಿಸಬೇಕೆನ್ನುವ ಆಯ್ಕೆ ನಮ್ಮ ಕೈಯಲ್ಲಿಲ್ಲ. ಅದು ಜಗನ್ನಿಯಾಮಕನ ಆಣತಿಯಂತೆ ನಡೆಯುತ್ತದೆ. ಬೇರೆ ಬೇರೆ ಧರ್ಮಗಳ ಉಪಾಸನಾ ಪದ್ಧತಿ ಭಿನ್ನವಾದದ್ದು. ಒಬ್ಬ ಮುಸಲ್ಮಾನನಾದರೆ ಮಸೀದಿಗೆ ಹೋಗಿ ನಿಯಮಿತವಾಗಿ ನಮಾಜು ಸಲ್ಲಿಸುತ್ತಾನೆ. ಕ್ರೈಸ್ತನಾದರೆ ಇಗರ್ಜಿಗೆ ಹೋಗಿ ಪ್ರಾರ್ಥಿಸುತ್ತಾನೆ. ಹಿಂದುವಾದರೆ ಮಂದಿರಗಳಲ್ಲಿ ಪೂಜೆ ಪುನಸ್ಕಾರಗಳಲ್ಲಿ ತೊಡಗಿಸಿಕೊಳ್ಳುತ್ತಾನೆ.

ಹಿಂದುಗಳಲ್ಲಿಯೂ ವಿವಿಧ ಜಾತಿಗಳಿಗನುಸಾರ ವಾಗಿ ಉಪಾಸನ ಪದ್ಧತಿಯಲ್ಲಿ ಪ್ರಭೇದಗಳಿವೆ. ತಮ್ಮ ತಮ್ಮ ಸಂಪ್ರದಾಯನುಸಾರ ಭಗವಂತನನ್ನು ಪೂಜಿಸುತ್ತಾರೆ; ಕೆಲವು ಜಾತಿಗಳಲ್ಲಿ ದೈವ, ಭೂತಾರಾಧನೆಯ ಸಂಪ್ರದಾಯವಿದೆ. ಜನ, ಮಂದಿರ ದೇವಸ್ಥಾನಗಳನ್ನು ಕಟ್ಟುವ, ಜೀರ್ಣೋದ್ಧಾರ ಮಾಡುವ ಪುಣ್ಯ ಕೆಲಸಗಳನ್ನು ಮಾಡುತ್ತಾರೆ. ವ್ರತ, ಉಪವಾಸ, ತೀರ್ಥ ಯಾತ್ರೆಗಳನ್ನು ಮಾಡಿ, ಭಗವಂತನ ಕೃಪೆ ಪಡೆದು, ಸಂಕಷ್ಟಗಳಿಂದ ದೂರವಾಗಲು ಇಚ್ಛಿಸುತ್ತಾರೆ.

ನಮ್ಮ ಬಂಟರಲ್ಲಿ ಪುರಾತನ ಕಾಲದಿಂದಲೂ ಪರತತ್ವವನ್ನು 'ನಾಗಬ್ರಹ್ಮರು' ಎಂದು ಪೂಜಿಸುತ್ತ ನಾಗಾರಾಧನೆ, ದೈವಾರಾಧನೆಗಳಲ್ಲಿ ತೊಡಗಿಸಿಕೊಂಡು ಭಗವಂತನ ಅನುಗ್ರಹಕ್ಕೆ ಪಾತ್ರರಾಗಲು ಪ್ರಯತ್ನಿಸುತ್ತ ಬಂದಿದ್ದೇವೆ.

'ಧರ್ಮ'ದ ವಿಚಾರದಲ್ಲಿ ನಮ್ಮ ಸಮಾಜದಲ್ಲಿ ಕಟ್ಟುಪಾಡುಗಳು ಕಡಿಮೆ. ಧರ್ಮದ ಪಥದಲ್ಲಿ ನಮ್ಮ ದಾರಿಯ ಆಯ್ಕೆಗೆ ನಮಗೆ ಸಾಕಷ್ಟು ಸ್ವಾತಂತ್ರ್ಯವಿದೆ.

ನಾವು ಪಾಲಿಸುವ ವ್ರತಗಳು, ಮಂದಿರಗಳ ನಿರ್ಮಾಣ, ಜೀರ್ಣೋದ್ಧಾರ, ತೀರ್ಥಯಾತ್ರೆ, ಪೂಜೆ ಇತ್ಯಾದಿ ಧಾರ್ಮಿಕ ಚಟುವಟಿಕೆಗಳು ಜನರಲ್ಲಿ ಆಸ್ತಿಕ ಪ್ರವೃತ್ತಿ ಮೂಡಿಸಲು, ದೈವ ಭಯ, ಪಾಪಭೀತಿ ಮೂಡಿಲು ಸಹಕಾರಿ. ಆದರೆ ಆತ್ಮೋದ್ಧಾರಕ್ಕೆ ಇಷ್ಟೇ ಸಾಕೆ ಎನ್ನುವ ಬಗ್ಗೆ ಕೂಲಂಕುಶ ಆತ್ಮವಿಮರ್ಶೆಗೆ ನಮ್ಮನ್ನು ಒಳಪಡಿಸಬೇಕು. ಎಲ್ಲ ಬಾಹ್ಯ ಧಾರ್ಮಿಕ ಚಟುವಟಿಕೆಗಳಿಗಿಂತ ಮೂಲಭೂತವಾದ, ಇನ್ನೊಂದು ಅಂತರಂಗದ ಯಾತ್ರೆ ಇದೆ. ನಮ್ಮನ್ನು ಸುಖಪ್ರಾಪ್ತಿಯ ಗುರಿಗೆ ತಲುಪಿಸುವ ದಾರಿ ಇದು. ಇದೇ ಆಧ್ಯಾತ್ಮ. ನಮ್ಮ ಧಾರ್ಮಿಕ ಚಟುವಟಿಕೆಗಳು ಸಿಪ್ಪೆಯಾದರೆ ಆಧ್ಯಾತ್ಮ ಎನ್ನುವುದು ಅದರ ತಿರುಳು.

ಜಗತ್ತಿನಲ್ಲಿ ಹುಟ್ಟಿರುವ ಪ್ರತಿ ಜೀವಿಯ ಬದುಕಿನ ಉದ್ದೇಶ ಒಂದೇ. ಅದು ಸುಖದ ಪ್ರಾಪ್ತಿ. ಸಾಮಾನ್ಯವಾಗಿ ನಾವು ಬಯಸಿದ ವಸ್ತು ಸಿಕ್ಕಿದಾಗ, ಅದು ಧನ, ಆಸ್ತಿ, ರುಚಿಯಾದ ಭೋಜನ ಆಗಿರಬಹುದು. ನಮಗೆ ಆನಂದದ ಅನುಭವ ಆಗುತ್ತದೆ. ನಾವು ಬಯಸಿದ ವಸ್ತು ಸಿಗುವವರೆಗೆ ಮನಸ್ಸು ಅಶಾಂತಿಯ, ತಳಮಳದ ಸ್ಥಿತಿಯಲ್ಲಿರುತ್ತದೆ. ಅದೇ ರೀತಿ ನಾವು ದ್ವೇಷಿಸುವ ವಸ್ತು ಅಥವಾ ವ್ಯಕ್ತಿ ಹತ್ತಿರವಿದ್ದಷ್ಟು ಸಮಯ ಇರುವ ಅಶಾಂತ ಮನೋಸ್ಥಿತಿ, ಅದು ದೂರವಾದಾಗ ಶಾಂತವಾಗುತ್ತದೆ. ಆದರೆ ಜಗತ್ತಿನಲ್ಲಿ ಮನಸ್ಸಿನಲ್ಲಿ ಆಸೆಗಳನ್ನು ಹುಟ್ಟಿಸುವ ವಸ್ತುಗಳು ಅಸಂಖ್ಯಾತ. ಒಂದು ವಸ್ತುವನ್ನು ಪಡೆದಾಗ ಉಂಟಾಗುವ ಶಾಂತಸ್ಥಿತಿ, ಸ್ವಲ್ಪ ಸಮಯದಲ್ಲಿ ಇನ್ನೊಂದು ವಸ್ತುವಿನ ಆಸೆಗೆ ಸಿಲುಕಿ ಅಶಾಂತ ಸ್ಥಿತಿಗೆ ಮರಳುತ್ತದೆ. ಆದುದರಿಂದ ಆಸೆಪಟ್ಟ ವಸ್ತುಗಳೆಲ್ಲ ಗಳಿಸಿಕೊಂಡು ನಿರಂತರ ಶಾಂತಿ ಹೊಂದಲು ವ್ಯಕ್ತಿ ಅಥವಾ ಘಟನೆಗಳನ್ನು ನಿಯಂತ್ರಿಸುವ, ಬದಲಾಯಿಸುವ ದೂರ ಮಾಡುವ ಶಕ್ತಿ ನಮ್ಮ ಕೈಯಲ್ಲಿ ಇಲ್ಲ.

ಆದರೆ ನಮ್ಮ ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ಹೊರಗಿನ ವಸ್ತುಗಳಿಂದ ಚಂಚಲವಾಗದಂತೆ ನೋಡಿಕೊಳ್ಳುವುದು ನಮ್ಮ ಕೈಯಲ್ಲೇ ಇದೆ. ಯಾವಾಗ ಈ ಸಾಮರ್ಥ್ಯ ನಮಗೆ ಬರುತ್ತದೊ, ಆಗ ನಮಗೆ ಆರಾಮ, ಶಾಂತಿ, ಸಂತೃಪ್ತಿ ಮತ್ತು ಸುಖದ ಅನುಭವ ನಿರಂತರವಾಗಿ ಲಭಿಸುತ್ತದೆ. ಈ ಮನೋಸ್ಥಿತಿ ಪಡೆಯಲು ನಾವು ಮಾಡುವ ಪ್ರಯತ್ನದ ಮಾರ್ಗವೆ ಆಧ್ಯಾತ್ಮಿಕ ಸಾಧನೆ.

ಮನಸ್ಸು ಶಾಂತ ಸ್ಥಿತಿಯಲ್ಲಿರಬೇಕಾದರೆ ಮೊಟ್ಟಮೊದಲು ಬೇಕಾದದ್ದು 'ನಿರ್ಮಲ ಮನ', 'ನಿಶ್ಚಲ ಮನ' ಮತ್ತು ತ್ರಿಕರಣ ಶುದ್ಧಿ. ಇದೊಂದು ಅತ್ಯಂತ ಸರಳ ಉಪಾಯ ಮತ್ತು ನಮ್ಮ ಹಿರಿಯರಲ್ಲಿ ಸಹಜವಾಗಿಯೇ ಇದ್ದದ್ದು, ಮನಸ್ಸಿನಲ್ಲಿ ಒಳ್ಳೆಯದನ್ನು ನೆನೆದು. ಅದನ್ನೆ ಬಾಯಲ್ಲಿ ಆಡಿ, ಆಡಿದ್ದನ್ನೆ ಕಾರ್ಯದಲ್ಲಿ ಮಾಡಿದರೆ ತ್ರಿಕರಣ ಶುದ್ಧಿ ಆದಂತೆ. ಇದನ್ನು ಪಾಲಿಸುವ ವ್ಯಕ್ತಿಗೆ 'ನಿದ್ರಾಹೀನತೆ', 'ಖಿನ್ನತೆ' ಇತ್ಯಾದಿ ತೊಂದರೆಗಳು ಹತ್ತಿರ ಸೋಂಕುವುದಿಲ್ಲ.

ತಾಯುಮುನವರ್ ಅನ್ನುವ ತಮಿಳುನಾಡಿನ ಪ್ರಸಿದ್ಧ ಸಿದ್ಧಪುರುಷನಿದ್ದ, ಅವನು ಹೇಳುತ್ತಿದ್ದ : 'ನಿಮ್ಮ ಮನೆಗೆ ಯಾರಾದರೂ ಅತಿಥಿಗಳನ್ನು ಕರೆಯುತ್ತೀರಿ. ಮನೆಯೊಳಗೆ ಕಸಗುಡಿಸಿ, ರಾಶಿ ಹಾಕಿ, ಅವರನ್ನು 'ಬನ್ನಿ ಕುಳಿತುಕೊಳ್ಳಿ' ಎಂದು

ಹೇಳಿದರೆ, ಅವರು ಕಸದ ರಾಶಿಯ ಮೇಲೆ ಕುಳಿತುಕೊಳ್ಳುತ್ತಾರೆಯೆ? ಹಾಗೆಯೆ ಮನಸ್ಸಿನಲ್ಲಿ ಕಲ್ಮಶ ತುಂಬಿಸಿಕೊಂಡು, ಹೊರಗಿನಿಂದ ಮಹಾ ಧಾರ್ಮಿಕನಂತೆ ವರ್ತಿಸಿದರೆ ಭಗವಂತ ನಿಮ್ಮ ಹೃದಯದಲ್ಲಿ ಬಂದು ನೆಲೆಸುತ್ತಾನೆಯೆ? ಖಂಡಿತ ಇಲ್ಲ.'

ಭಗವಾನ್ ರಮಣ ಮಹರ್ಷಿಯವರು ಹೇಳುತ್ತಾರೆ: 'ಭಗವಂತ ಬೇರೆ ಅಲ್ಲ, ಅವನ ಕೃಪೆ ಬೇರೆ ಅಲ್ಲ, ಸೂರ್ಯ ಬೇರೆ ಅಲ್ಲ, ಸೂರ್ಯನ ಬೆಳಕು ಬೇರೆ ಅಲ್ಲ ನೀವು ಕೈ ಮುಗಿದು 'ಬೆಳಕೇ ಒಳಗೆ ಬಾ' ಎಂದು ಬೊಬ್ಬೆ ಹಾಕಬೇಕೆಂದಿಲ್ಲ. ನಿಮ್ಮ ಮನಸ್ಸೆಂಬ ಕಿಟಕಿಯ ಗಾಜುಗಳ ಕಲ್ಮಶವನ್ನು ಒರೆಸಿದರೆ ಸಾಕು. ಕೃಪೆಯ ಬೆಳಕು ಚಿಮ್ಮಿ ಬರುತ್ತದೆ.' ಆದರೆ ಈ ಒರೆಸುವ ಕ್ರಿಯೆಗಳು ಯಾವುದು? ನಾನು ಸ್ಮರಣೆ, ಧ್ಯಾನ, ನಿಸ್ವಾರ್ಥ, ಅಹಂಕಾರರಹಿತ ಸೇವೆ ಈ ಸಾಧನೆಗಳಿಂದ ಭಕ್ತಿ ಹಣ್ಣಾಗುತ್ತದೆ; ಹೃದಯ ಮೃದುವಾಗಿ, ಮಾತು ಮಧುರವಾಗುತ್ತದೆ. ಪ್ರೇಮ, ಕರುಣೆ, ದಯೆ, ಮೈತ್ರಿ ಭಾವ ಹೃದಯದಲ್ಲಿ ತುಂಬುತ್ತದೆ. ಭಗವತ್ಪ್ರೇಮ ಒಳಗೆ ಜಾಗೃತವಾಗಿ ಬದುಕು ಸಫಲವಾಗುತ್ತೆ, ಸುಖಮಯವಾಗುತ್ತದೆ. ನಮ್ಮ ಬಂಟ ಸಮಾಜದ ಚಾರಿತ್ರ್ಯ ವಿಶೇಷತೆಗಳಲ್ಲಿ ಒಂದು ಪ್ರಮುಖ ಗುಣವಿತ್ತು. ನಮ್ಮ ಹಿರಿಯರು ಯಾವ ಧಾರ್ಮಿಕ ಸಂಪ್ರದಾಯಗಳ ಕಂದಾಚಾರಕ್ಕೆ ಜೋತು ಬೀಳದಿದ್ದರೂ, 'ಸತ್ಯ', 'ಧರ್ಮ' ವಚನ ಪರಿಪಾಲನೆಯ ಅನುಷ್ಠಾನದಲ್ಲಿ ನಿಷ್ಠುರರಾಗಿದ್ದರು.

ಬಂಟ ಸಮಾಜದ ಅಪ್ರತಿಮ ನೇತಾರ ದಿವಂಗತ ಅತ್ತಾವರ ಬಾಲಕೃಷ್ಣ ಶೆಟ್ಟಿಯವರು, ರಾಮಕೃಷ್ಣ ಪರಮಹಂಸರ ವಿಶ್ವಭ್ರಾತೃತ್ವದ ಆಧ್ಯಾತ್ಮ ಚಿಂತನೆಗಳಿಂದ ಪ್ರಭಾವಿತರಾಗಿ, ದಕ್ಷಿಣಕನ್ನಡ ಜಿಲ್ಲೆಯ ಹಲವಾರು ಸ್ಥಳಗಳಲ್ಲಿ 'ರಾಮಕೃಷ್ಣ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ ಸಮಾಜದ ಯುವಕರು ವಿದ್ಯೆಯಿಂದ ವಂಚಿತರಾಗದಂತೆ ನೋಡಿಕೊಂಡರು'. ಅವರ ಉನ್ನತ ಆದರ್ಶಗಳಿಂದ ಪ್ರೇರೇಪಿತರಾದ ಎಷ್ಟೋ ಯುವಕರು ಉತ್ತಮ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಸಮಾಜದ ಮುಖಂಡರೆನ್ನಿಸಿದರು.

ಆದರೆ ಇದು ಧನಸಂಚಯವೊಂದೇ ಬದುಕಿನ ಗುರಿಯಾಗಿ, ಹೊಂದಿರುವ ಸಂಪತ್ತೇ ಯೋಗ್ಯತೆಯ ಗೌರವದ ಮಾನದಂಡವಾಗಿ, ಎಲ್ಲಿ ನಮ್ಮ ಹಿರಿಯರ ಆದರ್ಶತತ್ವಗಳನ್ನು ಮರೆತಿದ್ದೇವೋ ಅನಿಸುತ್ತದೆ. ಧನ ಸಂಪಾದನೆಯ ಗುರಿ ಖಂಡಿತ ತಪ್ಪಲ್ಲ. ಆದರೆ ಅದನ್ನು ತಲುಪುವದಾರಿ ನೈತಿಕತೆಯಿಂದ ಕೂಡಿದ ನೇರದಾರಿಯೇ ಅನ್ನುವ ಆತ್ಮವಿಮರ್ಶೆ ಮಾಡಿಕೊಳ್ಳುವ ಸಮಯ ಬಂದಿದೆ. ಒಂದಂತು ಖಂಡಿತ. ಧರ್ಮ ಸಮ್ಮತವಲ್ಲದ ದಾರಿ ನಮ್ಮ ಹಾಗೂ ಕುಟುಂಬದ ನೋವು ಸಂಕಷ್ಟಗಳಿಗೆ ನೇರ ಆಹ್ವಾನ. ಭಗವತ್‌ಕೃಪೆ ಪ್ರಾಪ್ತಿಯಾಗುವುದು ಸದ್ವಿಚಾರ ಸನ್ನಡತೆಯಿಂದಲೆ ಹೊರತು ತೋರಿಕೆಯ ಧಾರ್ಮಿಕತೆಯಿಂದ ಅಲ್ಲ.

ಈ ಘಟ್ಟದಲ್ಲಿ ನಮ್ಮ ಯುವಜನಾಂಗ ಸನ್ಮಾರ್ಗದಲ್ಲಿ ನಡೆಯುವಂತೆ ಉತ್ತಮ ಸಂಸ್ಕಾರ ನೀಡುವ ಜವಾಬ್ದಾರಿ ನಮ್ಮದು. ಅಧ್ಯಾತ್ಮ ಚಿಂತನೆಯಲ್ಲಿ ಆಸಕ್ತಿ ಮೂಡಿಸುವ ಮತ್ತು ಅವರನ್ನು ನಮ್ಮ ಸಮಾಜದ ಹೆಮ್ಮೆಯ ಸತ್ಪ್ರಜೆಗಳಾಗುವಂತೆ ಪ್ರೇರೇಪಿಸುವ ಜವಾಬ್ದಾರಿ ಹಿರಿಯರದ್ದು. ಆಧ್ಯಾತ್ಮದ ತಿರುಳಿನ ರುಚಿ ಅವರಿಗೆ ಹಿಡಿಸುವಂತೆ ಮಾಡಬೇಕು. ಆಗ ಉಳಿದ ಸದ್ಗುಣಗಳು ಸಹಜವಾಗಿಯೆ ಅವರಲ್ಲಿ ಮೈಮೂಡಿ, ತಮಗೂ ತಮ್ಮ ಕುಟುಂಬಕ್ಕೂ ಸಮಾಜಕ್ಕೂ ಆನಂದ ಹಂಚುತ್ತ ಪರಿಪೂರ್ಣ ಮನುಷ್ಯರಾಗಿ ಅವರು ರೂಪುಗೊಳ್ಳುತ್ತಾರೆ.

## ಸಮಾಜ ಸೇವಾ ವಿಭಾಗದಿಂದ ಆಧಾರ್ ನೋಂದಣಿ ಸೇವೆಗೆ ಚಾಲನೆ



ಸಂಘದ ಸಮಾಜ ಸೇವಾ ವಿಭಾಗದ ವತಿಯಿಂದ ಸಂಘದ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆಯ ವಿದ್ಯಾರ್ಥಿಗಳು, ಸಂಘದ ಸದಸ್ಯರು ಹಾಗೂ ಸಾರ್ವಜನಿಕರ ಸೇವೆಗಾಗಿ ಪ್ರಾರಂಭಿಸಿದ ತಾತ್ಕಾಲಿಕ 'ಆಧಾರ್ ನೋಂದಣಿ ಕೇಂದ್ರ'ಕ್ಕೆ ದಿನಾಂಕ 31.08.2016 ರಂದು ಸಂಘದ ಅಧ್ಯಕ್ಷರಾದ ಶ್ರೀ ಡಿ. ಚಂದ್ರಹಾಸ ರೈಯವರು ಚಾಲನೆ ನೀಡಿದರು. ಸಂಘದ ಪದಾಧಿಕಾರಿಗಳು, ಸಮಾಜ ಸೇವಾ ವಿಭಾಗದ ಸದಸ್ಯರು ಉಪಸ್ಥಿತರಿದ್ದರು. ಈ ಸೇವೆಯು ದಿನಾಂಕ 31.08.2016 ರಿಂದ 10.09.2016 ರವರೆಗೆ ಲಭ್ಯವಿದೆ.

**ರಾಧಾಕೃಷ್ಣ ಶೆಟ್ಟಿ**
ಚೇರ್‌ಮೆನ್, ಸಮಾಜ ಸೇವಾ ಸಮಿತಿ

# ಜಾಗತಿಕ ಬಂಟ ಪ್ರತಿಷ್ಠಾನ (ರಿ)

**Dr. B.R.Shetty Cottage**
Bunts Hostel Circle, Mangaluru-575003
Ph: 0824-2494205

ವಿದ್ಯಾಭ್ಯಾಸ ಸಾಲ ಮತ್ತು ವಿದ್ಯಾರ್ಥಿವೇತನ

World Bunts Foundation Trust ®,Mangalore, invites application on Merit cum means basis,from eligible students for Education loan/ Education scholarship for the year 2016-17.

**Education loan ( Fresh)**

ವಿದ್ಯಾಭ್ಯಾಸ ಸಾಲ/**Educational Loan:- Medical, Dental and Engineering Courses**
Application for Education loan 2016-2017, will be called after announcement of NEET results.

**II) Renewal of Education loan availed in the previous years**

Students, who have availed Education loan in the previous years ( from 2013-14 to 2015-16) are eligible for current years instalments. Application for 2nd, 3rd, and 4th year studies be sent to the office of the Trust, along with duly attested photo copies of following documents.

1) Marks cards of applicable previous 2 semisters
2) Fee paid receipt for the year 2016-2017
3) Study certificate issued by the college authorities.

**III)** ವಿದ್ಯಾರ್ಥಿವೇತನ **(Educational Scholarship)**

**(A) Fresh**

| Course | Eligible |
|---|---|
| 1. Polytechnic Diploma/ITI/BPED/B.Ed./D.Ed/JOC: Eligible of | minimum 60% marks in qualifying Exams |
| 2. Post Graduation (M.A./M.Com./MBA/M.Sc.,/MCA/MSW):Eligible of | minimum 80% marks in qualifying Exams |
| 3. Nursing/Pharmacy/Para Medical:. Eligible of | minimum 50% marks in qualifying Exams |
| 4. Fisheries/Veternary/Agricuture: Eligible of | minimum 80% marks in qualifying Exams |

**(B) Renewal of Educational Scholarship availed in the previous years**

Students, who have availed Education Scholarship in the previous years ( from 2014-15 to 2015-16) are eligible for current years instalments. Application for 2nd & 3rdyear studies be sent to the office of the Trust, along with duly attested photo copies of following documents, duly mentioning previous Scholarship reference number.

1) Marks cards of applicable previous 2 semisters.
2) Fee paid receipt for the year 2016-2017
3) Study certificate issued by the college authorities.

Application for fresh Educational Scholarship may be down loaded from the webs theTrust,**(www.worldbunts.org,Events & Activities page) Application for Educational Scholarship.**

Duely filled in applicants along with the attested copies of the documents mentioned on the application be sent to office of the Trust on before 30.09.2016.(Application received there after not be Considered.

**ಕೆ. ಜೈರಾಜ್ ಬಿ. ರೈ**
ಗೌರವ ಕಾರ್ಯದರ್ಶಿ
**ಜಾಗತಿಕ ಬಂಟ ಪ್ರತಿಷ್ಠಾನ**

# ಸಾಧನೆಯ ಛಲ... ಒತ್ತಾಸೆಯ ಬಲ

## ನಾಗರಿಕ ಸೇವೆಗೆ ಆಯ್ಕೆಯಾದ ನಿವ್ಯಾ ಪಿ. ಶೆಟ್ಟಿಯ ಯಶಸ್ಸಿನ ಗುಟ್ಟು



ನಿವ್ಯಾ ಪಿ. ಶೆಟ್ಟಿ

ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ ಎನ್ನುವುದಕ್ಕೆ ನಿವ್ಯಾ ಶೆಟ್ಟಿ ನಿದರ್ಶನ. ನಮ್ಮ ಸಮುದಾಯದ ಯುವಜನಾಂಗದಲ್ಲಿ ಅಪೂರ್ವ ಪ್ರತಿಭೆ, ಚಾಕಚಕ್ಯತೆ, ಕಠಿಣ ಪರಿಶ್ರಮದ ಮನೋಭಾವ, ಸಾಧಿಸುವ ಛಲ ಎಲ್ಲವೂ ಇದ್ದರೂ, ನಾಗರಿಕ ಸೇವೆ ಅಥವಾ ಸರ್ಕಾರಿ ಉದ್ಯೋಗ ಎಂದರೆ ದೂರ ಅಲರ್ಜಿ. ಸಮುದಾಯದ ಪ್ರತಿಭೆಗಳೆಲ್ಲ ಖಾಸಗಿ ಕಂಪನಿಗಳ ಉದ್ಯೋಗ ಅಥವಾ ಸ್ವಂತ ಉದ್ದಿಮೆ ಕ್ಷೇತ್ರಕ್ಕೇ ಅಂಟಿಕೊಳ್ಳುವ ಉದಾಹರಣೆಗಳೇ ಹೆಚ್ಚು. ಆದರೆ ಕೇಂದ್ರ ಸಾರ್ವಜನಿಕ ಸೇವಾ ಆಯೋಗ (ಯುಪಿಎಸ್‌ಸಿ) ನಡೆಸಿದ ನಾಗರಿಕ ಸೇವಾ ಪರೀಕ್ಷೆಯಲ್ಲಿ ಮೊದಲ ಪ್ರಯತ್ನದಲ್ಲೇ 274ನೇ ರ‍್ಯಾಂಕ್ ಗಳಿಸಿ ಆಯ್ಕೆಯಾದ ನಿವ್ಯಾ ಶೆಟ್ಟಿಯ ಯಶೋಗಾಥೆ ಇದಕ್ಕೆ ಅಪವಾದ.

ಐಎಎಸ್ ಕನಸು ಸಾಕಾರಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಅವರ ಮೊದಲ ಪ್ರಯತ್ನಕ್ಕೆ ತಕ್ಕ ಪ್ರತಿಫಲ ಸಿಕ್ಕಿದೆ. ಯುಪಿಎಸ್‌ಸಿ ಪರೀಕ್ಷೆಯಲ್ಲಿ 274ನೇ ರ‍್ಯಾಂಕ್ ಗಳಿಸಿದ ನಿವ್ಯಾ ಪಿ.ಶೆಟ್ಟಿ ಇದೀಗ ಭಾರತ ಸರ್ಕಾರದ ಕಂದಾಯ ಸೇವೆ ಅಧಿಕಾರಿಯಾಗಿ ನಿಯುಕ್ತರಾಗಿದ್ದಾರೆ. ಈ ಮೂಲಕ ಬಂಟ ಸಮುದಾಯದ ಹಲವು ಪ್ರತಿಭೆಗಳಿಗೆ ಇಂಥ ಸೇವೆಗೆ ಸ್ಫೂರ್ತಿ ನೀಡುವ ಚಿಲುಮೆಯಾಗಿದ್ದಾರೆ.

ಇವರ ತಂದೆ ಎಸ್.ಪ್ರಕಾಶ್ ಶೆಟ್ಟಿ ಹೈಕೋರ್ಟ್ ವಕೀಲ ಹಾಗೂ ಭಾರತ ಸರ್ಕಾರದ ಹಿರಿಯ ಸ್ಥಾಯಿ ಅಭಿಯೋಜಕರು. ತಾಯಿ ನರ್ಮದಾ ಪಿ. ಶೆಟ್ಟಿ. ಸಹೋದರಿ ಶ್ರಾವ್ಯ ಪಿ. ಶೆಟ್ಟಿ ಪ್ರಸ್ತುತ 2ನೇ ವರ್ಷದ ಎಂಬಿಬಿಸ್ ವ್ಯಾಸಂಗ ಮಾಡುತ್ತಿದ್ದಾರೆ.

'ಬೆಳೆಯುವ ಸಿರಿಯನ್ನು ಮೊಳಕೆಯಲ್ಲೇ ಕಾಣು' ಎಂಬಂತೆ ನಿವ್ಯಾ ಶೈಕ್ಷಣಿಕ ವಿಭಾಗದಲ್ಲಿ ಮೊದಲಿನಿಂದಲೂ ಎತ್ತಿದ ಕೈ. ಬೆಂಗಳೂರಿನ ಸೋಫಿಯಾ ಹೈಸ್ಕೂಲ್‌ನಲ್ಲಿ 10ನೇ ತರಗತಿ ಪೂರೈಸಿ ಅದೇ ಸಂಸ್ಥೆಯಲ್ಲಿ 12ನೇ ತರಗತಿಯಲ್ಲಿ ಶೇ. 94.3 ಅಂಕದೊಂದಿಗೆ ಶಾಲೆಯಲ್ಲಿ ದ್ವಿತೀಯ ಸ್ಥಾನ ಪಡೆದ ನಿವ್ಯಾ, 2014ರಲ್ಲಿ ಸರ್. ಎಂ. ವಿಶ್ವೇಶ್ವರಯ್ಯ ತಾಂತ್ರಿಕ ಕಾಲೇಜಿನಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಜಿನಿಯರಿಂಗ್ ಪದವಿ ಪಡೆದರು. ಎಂಜಿನಿಯರಿಂಗ್ ಪದವಿಯ ಎಲ್ಲ ಸೆಮಿಸ್ಟರ್‌ಗಳಲ್ಲೂ ಡಿಸ್ಟಿಂಕ್ಷನ್‌ನೊಂದಿಗೆ ಉತ್ತೀರ್ಣರಾದ ಇವರು, ನಾಲ್ಕನೇ ಸೆಮಿಸ್ಟರ್‌ನಲ್ಲಿ ಕಾಲೇಜಿನಲ್ಲೇ ಅಗ್ರಸ್ಥಾನ ಪಡೆದಿದ್ದರು.

ಪಠ್ಯದ ಜತೆ ಪಠ್ಯೇತರ ಚಟುವಟಿಕೆಗಳಲ್ಲೂ ಸಕ್ರಿಯರಾಗಿದ್ದ ನಿವ್ಯಾ, ಇಂಟರ‍್ಯಾಕ್ಟ್ ಕ್ಲಬ್ ಉಪಾಧ್ಯಕ್ಷೆಯಾಗಿ, ಕ್ರೀಡಾ ತಂಡದ ನಾಯಕಿಯಾಗಿ ಹಲವು ವಿಭಾಗಗಳಲ್ಲಿ ಪ್ರಶಸ್ತಿ ಗಳಿಸಿ ಗಮನ ಸೆಳೆದಿದ್ದರು. ಸೋಫಿಯಾ ಸ್ಟಾಫ್ ಲೀಡರ್‌ಶಿಪ್ ಮತ್ತು ಸರ್ವೀಸ್ ಪ್ರಶಸ್ತಿ, ಟಿ.ಐ. ಜೋಸೆಫ್ ಸ್ಮಾರಕ ಪರ್ಯಾಯ ಫಲಕ ಕೂಡಾ ಇವರಿಗೆ ಸಂದಿತ್ತು.

ವಿದ್ಯಾರ್ಥಿ ದೆಸೆಯಲ್ಲೇ ಇವರ ಪ್ರತಿಭೆ ಅಂತರರಾಷ್ಟ್ರೀಯ ಮಟ್ಟಕ್ಕೂ ಕರೆದೊಯ್ದಿತ್ತು. ಅಮೆರಿಕದ ವಾಷಿಂಗ್ಟನ್ ಡಿಸಿಯಲ್ಲಿ ನಡೆದ ಜಾಗತಿಕ ಯುವ ನಾಯಕತ್ವ ಸಮ್ಮೇಳನಕ್ಕೆ ನಿವ್ಯಾ ಆಹ್ವಾನಿತರಾಗಿದ್ದರು. ವಿಶ್ವಸಂಸ್ಥೆಯ ಬೆಂಗಳೂರು ಮಾದರಿ ಸ್ಪರ್ಧೆಯಲ್ಲಿ ಉತ್ತಮ ತಂಡ ಪ್ರಶಸ್ತಿ ಗೌರವಕ್ಕೂ ಪಾತ್ರರಾಗಿದ್ದರು. ಎಂಜಿನಿಯರಿಂಗ್ ಪದವಿಯಲ್ಲಿ ಚರ್ಚಾಸ್ಪರ್ಧೆ ಹಾಗೂ ರಸಪ್ರಶ್ನೆ ಸ್ಪರ್ಧೆಗಳಲ್ಲಿ ಪ್ರತಿ ವರ್ಷವೂ ಬಹುಮಾನಗಳನ್ನು ಬಾಚಿಕೊಂಡಿದ್ದರು.

ಎಂಜಿನಿಯರಿಂಗ್ ಪದವಿ ಪಡೆಯುತ್ತಿರುವಾಗಲೇ ಪ್ರತಿಷ್ಠಿತ ಇಂಟೆಲ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ಪಡೆದ ನಿವ್ಯಾ ತಮ್ಮ ವೃತ್ತಿ ಆರಂಭಿಸಿದ ಮೊದಲ ವರ್ಷವೇ ತಿಂಗಳ ಉದ್ಯೋಗಿ ಪ್ರಶಸ್ತಿಗೆ ಭಾಜನರಾದರು. ಈ ಸಾಧನೆಗಾಗಿ ಶಿಫ್ಟ್ ಮ್ಯಾನೇಜರ್ ಹುದ್ದೆಗೂ ಬಡ್ತಿ ಪಡೆದರು. ಡಾ.ಎ.ಪಿ.ಜೆ ಅಬ್ದುಲ್ ಕಲಾಂ ಅವರ 'ವಿಷನ್ 2009' ರಲ್ಲಿ ಗುರಿ ನಿಗದಿ ಹಾಗೂ ಉತ್ತೇಜಕ ಕೌಶಲ ಕಾರ್ಯಕ್ರಮದಲ್ಲೂ ಭಾಗವಹಿಸಿದ್ದರು. ಆರ್ಟ್ ಆಫ್ ಲಿವಿಂಗ್ ಫೌಂಡೇಷನ್‌ನ ಉತ್ತಮ ಭಾರತದ ಸ್ವಯಂಸೇವಕ ಯೋಜನೆಯಲ್ಲೂ ಭಾಗವಹಿಸಿದ್ದರು. ದೆಹಲಿಯಲ್ಲಿ 'ಟೈಮ್ಸ್ ನೌ' ಹಾಗೂ 'ಮಾರುತಿ ಸುಝುಕಿ' ಆಯೋಜಿಸಿದ್ದ ಯುವ ಸಂಸತ್ ಕಾರ್ಯಕ್ರಮದ ಅಂತಿಮ ಸುತ್ತಿಗೆ ಆಯ್ಕೆಯಾದ 14 ಮಂದಿಯಲ್ಲಿ ಇವರೂ ಸ್ಥಾನ ಪಡೆದಿದ್ದರು.

ಇಷ್ಟೊಂದು ಪ್ರತಿಭೆಯ ನಿವ್ಯಾ ಯಾವುದೇ ಖಾಸಗಿ ಉದ್ಯೋಗದ ಆಮಿಷಕ್ಕೆ ಒಳಗಾಗದೇ, ನಾಗರಿಕ ಸೇವೆಗೆ ಸೇರಿ, ಸಾರ್ವಜನಿಕರ ಸೇವೆ ಮಾಡಬೇಕು ಎಂಬ ಧ್ಯೇಯಕ್ಕೆ ಕಟ್ಟುಬಿದ್ದರು. 2015ರಲ್ಲಿ ಮೊದಲ ಪ್ರಯತ್ನದಲ್ಲೇ ಯುಪಿಎಸ್‌ಸಿ ಪರೀಕ್ಷೆಯಲ್ಲಿ 274ನೇ ರ‍್ಯಾಂಕ್ ಪಡೆದರು. ಇದೀಗ ಭಾರತೀಯ ಕಂದಾಯ ಸೇವೆ-ಆದಾಯ ತೆರಿಗೆ ಅಧಿಕಾರಿಯಾಗಿ ನಿಯುಕ್ತರಾಗಿದ್ದಾರೆ. ನಿವ್ಯಾ ಸಾಧನೆಯ ಯಶಸ್ಸು ಸಮಾಜದ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿ.

(ಪುಟ ಸಂಖ್ಯೆ 27ರಲ್ಲಿ ಮುಂದುವರಿಯುವುದು...)

# ಬಂಟರ ಸಂಘ ಬೆಂಗಳೂರು
# 2016–18 ನೇ ಸಾಲಿನ ಕಾರ್ಯಕಾರಿ ಸಮಿತಿ

## ನಾಮನಿರ್ದೇಶಿತ ಸದಸ್ಯರು



ಶ್ರೀ ಅಶೋಕ್ ಕುಮಾರ್ ಶೆಟ್ಟಿ ಎಸ್.



ಶ್ರೀ ಸುಧಾಕರ ಶೆಟ್ಟಿ ಎಸ್.



ಶ್ರೀ ಆರ್. ಉಪೇಂದ್ರ ಶೆಟ್ಟಿ

## ಡೋನರ್ ಟ್ರಸ್ಟಿ ಸದಸ್ಯರು



ಶ್ರೀ ಪಿ.ವಿ. ಶೆಟ್ಟಿ



ಶ್ರೀಮತಿ ಆಶಾ ಗೋಪಿನಾಥ್



ಡಾ|| ಡಿ. ಕೃಷ್ಣಾನಂದ ಚೌಟ



ಡಾ|| ಕೈಜ್ಞಾರ್ ಕಂಬ್ಳಿ



ಶ್ರೀ ದಿವಾಕರ್ ಶೆಟ್ಟಿ

ADVT.


Grand Vijaya Housing & Vehicle Loan Carnival*
Limited Period offer
* Waiver of processing, Inspection & Documentation Charges
* conditions apply
Refer the bank to your friend
विजया बैंक
VIJAYA BANK
(A GOVT. OF INDIA UNDERTAKING)
A friend you can bank upon
HEAD OFFICE: 41/2, M.G. ROAD, BANGALORE - 560 001
Toll Free: 1800 425 5885 www.vijayabank.com

ADVT.

# ಬೆಂಗಳೂರು ಬಂಟರ ಸಂಘದ ಚುನಾವಣೆಡ್ ಗೆಂದಿನ ಎಂಕ್ಲೆನ ಸದಸ್ಯರೆಗ್ ಎಡ್ಡೆಪ್ಪು ಬಯಕುವ...







ಶ್ರೀ ಸಂತೋಷ್ ಶೆಟ್ಟಿ ಜೆ.
ಮಾನಾದಿಗೆದ ಕಾರ್ಯಂತೆರ್

ಶ್ರೀ ಚಂದ್ರಹಾಸ ರೈ ಡಿ.
ಗುರ್ಕಾರ್ಲು

ಶ್ರೀ ಬಿ. ಆನಂದರಾಮ್ ಶೆಟ್ಟಿ
ಪಣವುದ ಕಜ್ಜದಾರ್









ಶ್ರೀಮತಿ ಅಮೃತ್ ಪಿ. ರೈ
ಒತ್ತು ಗುರ್ಕಾರ್ಲು

ಶ್ರೀಮತಿ ಕಾಂತಿ ಶೆಟ್ಟಿ
ಒತ್ತು ಕಾರ್ಯಂತೆರ್

ಶ್ರೀ ಪ್ರೇಮ್ ಪ್ರಸಾದ್ ಶೆಟ್ಟಿ
ಕಾರ್ಯಕಾರಿ ಸಮಿತಿ ಸದಸ್ಯರ್

ಶ್ರೀ ರಮಿತ್ ಬಿ. ಶೆಟ್ಟಿ
ಕಾರ್ಯಕಾರಿ ಸಮಿತಿ ಸದಸ್ಯರ್

# ಬೆಂಗಳೂರು ತುಳು ಕೂಟ (ರಿ.)





ಶ್ರೀ ಸುಂದರ್ ರಾಜ್ ರೈ
ಕಾರ್ಯಂತೆರ್

ಶ್ರೀ ಎಂ. ಸ್ವಯಂಪ್ರಕಾಶ್
ಗುರ್ಕಾರ್ಲು

ಒತ್ತು ಗುರ್ಕಾರ್ಲು

ಡಾ। ಬಿ. ತಾರಾನಾಥ್ ಹೆಗ್ಡೆ, ಶ್ರೀ ಜಗತ್ಪಾಲ್ ಶೆಟ್ಟಿ ಚಂದಾಡಿ, ಶ್ರೀಮತಿ ರತ್ನಮಾಲಾ ಪುರಂದರ್

ಶ್ರೀ ನಾರಾಯಣ ಬಿ. ಭಂಡಾರಿ,
ಪಣವುದ ಕಜ್ಜೆದಾರ್

ಶ್ರೀ ಅಜಿತ್ ಹೆಗ್ಡೆ ಕೆ.
ಸಂಘಟನಾ ಕಾರ್ಯಂತೆರೆ

ಕಾರ್ಯಕಾರಿ ಸಮಿತಿ ಸದಸ್ಯೆರು ಬೊಕ್ಕ ಮಾತ ಸದಸ್ಯೆರು

ADVT.

# ಅಭಿನಂದನೆಗಳು



**ಶ್ರೀ ಚಂದ್ರಹಾಸ್ ರೈ ಡಿ.**

ಅಧ್ಯಕ್ಷರು, ಬಂಟರ ಸಂಘ, ಬೆಂಗಳೂರು.

ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತದ ನಿರ್ದೇಶಕರಾದ **ಶ್ರೀ ಚಂದ್ರಹಾಸ್ ರೈ ಡಿ.** ಯವರು 2016-18 ನೇ ಸಾಲಿನ ಬೆಂಗಳೂರು ಬಂಟರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಶುಭ ಸಂದರ್ಭದಲ್ಲಿ ಸಂಘವು ತಮ್ಮ ಆಡಳಿತಾವಧಿಯಲ್ಲಿ ಇನ್ನಷ್ಟು ಅಭಿವೃದ್ಧಿ ಪಥದಲ್ಲಿ ಮುನ್ನಡೆಯಲಿ ಎಂದು ಹಾರೈಸುವ

**ಶ್ರೀ ಇರ್ಮಾಡಿ ಜಯಪ್ರಸಾದ ಶೆಟ್ಟಿ**
ಅಧ್ಯಕ್ಷರು

**ಶ್ರೀ ಕೆ. ಭಗವಾನ್‌ದಾಸ್ ರೈ**
ಉಪಾಧ್ಯಕ್ಷರು

ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗ

**ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ**

ADVT.

# ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನಕ್ಕೆ 25ರ ಸಂಭ್ರಮ




ಬೆಂಗಳೂರು ಬಂಟರ ಸಂಘದ ದೂರದೃಷ್ಟಿ ಯೋಜನೆಗಳಿಗೆ ಹೊಸ ಪರಿಕಲ್ಪನೆ ನೀಡಿದ ಕೀರ್ತಿ ಶೇಷ ಶ್ರೀನಿವಾಸ ಆಳ್ವರ ಅಧ್ಯಕ್ಷೀಯ ಅವಧಿಯಲ್ಲಿ ಪ್ರಾರಂಭಗೊಂಡ ನಮ್ಮ ವಿದ್ಯಾಸಂಸ್ಥೆ ಇಂದು ತನ್ನ ಸಾರ್ಥಕ 25 ಸಂವತ್ಸರಗಳನ್ನು ಪೂರೈಸಿದ ಸಂಭ್ರಮದಲ್ಲಿದೆ.

ಇಂದು ಸಾವಿರಾರು ವಿದ್ಯಾರ್ಥಿಗಳ ಜ್ಞಾನಾರ್ಜನೆಯ



ಕೇಂದ್ರವಾಗಿ ಶಾಲೆ ಬೆಳೆದು ನಿಂತಿರುವ ಈ ಸಂದರ್ಭದಲ್ಲಿ ಸ್ಥಳದಾನಿಗಳಾದ ಕೀರ್ತಿಶೇಷ ಹರೇಕಳ ತಿಮ್ಮಪ್ಪ ಭಂಡಾರಿ ದಂಪತಿಗಳ ಕೊಡುಗೆ ಸದಾ ಸ್ಮರಣೀಯ.

1991ರಲ್ಲಿ ಅಮ್ಮಣ್ಣಿ ರಾಮಣ್ಣ ಶೆಟ್ಟಿ ಟ್ರಸ್ಟ್‌ನ ಸಹಕಾರದೊಂದಿಗೆ 1ನೇ ತರಗತಿಯಿಂದ ಪ್ರಾರಂಭಗೊಂಡ ರಾಮಕೃಷ್ಣ ವಿದ್ಯಾನಿಕೇತನ ಶಾಲೆಗೆ 1999ರ ವರೆಗೆ ಟ್ರಸ್ಟ್‌ನ ವತಿಯಿಂದ ವರ್ಷಂಪ್ರತಿ 1 ಲಕ್ಷ ರೂಪಾಯಿಗಳನ್ನು ದೇಣಿಗೆ ನೀಡುವುದರ ಮೂಲಕ ಶಾಲೆ ಸುಗಮವಾಗಿ ನಡೆಯಲು ಕಾರಣರಾದ ಶ್ರೀ ಕೆ.ಪಿ. ರಾಮಣ್ಣ ಶೆಟ್ಟಿಯವರ ಔದಾರ್ಯವನ್ನು ನಾವು ಸ್ಮರಿಸಲೇಬೇಕು.

ತದನಂತರದ ದಿನಗಳಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಾದ ಬದಲಾವಣೆಗೆ ಪೂರಕವಾಗುವಂತೆ ಸಂಘವು ಸುಸಜ್ಜಿತ ಶಾಲೆಯನ್ನು ನಿರ್ಮಾಣ ಮಾಡಬೇಕೆಂಬ ಕನಸು 2001ರಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಐ.ಎಂ.ಜಯರಾಮ ಶೆಟ್ಟಿಯವರು ಈ ಮಹತ್ವಾಕಾಂಕ್ಷಿ ಯೋಜನೆಯನ್ನು ಪೂರ್ಣಗೊಳಿಸಿದರು. ಕೇವಲ 90 ದಿನಗಳಲ್ಲಿ 45 ತರಗತಿ ಕೊಠಡಿಗಳ 2 ಅಂತಸ್ತಿನ ಕಟ್ಟಡವನ್ನು ನಿರ್ಮಾಣ ಮಾಡಿ ಚರಿತ್ರಾರ್ಹ ಸಾಧನೆಗೆ ಕಾರಣರಾದರು. ಸುಸಜ್ಜಿತ ಶಾಲಾ ಕಟ್ಟಡದ ನಿರ್ಮಾಣದ ಹೊಣೆ ಮತ್ತು ಪೂರ್ಣ ವೆಚ್ಚವನ್ನು ಶ್ರೀಯುತ ಆರ್.ಎನ್.ಶೆಟ್ಟಿಯವರು ಭರಿಸಿ ಅಪಾರ ಕೊಡುಗೆಯನ್ನು ಸಮಾಜಕ್ಕೆ ನೀಡಿದ್ದರ ಫಲವಾಗಿ ಸಂಘದ ಶಾಲೆಗೆ ಆರ್.ಎನ್.ಎಸ್. ವಿದ್ಯಾನಿಕೇತನ ಎಂದು ಮರುನಾಮಕರಣ ಮಾಡಲಾಯಿತು. ಹೊಸ ಕಟ್ಟಡ ನಿರ್ಮಾಣದ ಜೊತೆಗೆ ಮಾಂಟೆಸರಿಯಿಂದ 10ನೇ ತರಗತಿಯವರೆಗೆ ಐ.ಸಿ.ಎಸ್.ಇ. ಪಠ್ಯಕ್ರಮಕ್ಕೆ ಅನುಮತಿ, ಗ್ರಂಥಾಲಂಯ, ಪ್ರಯೋಗಾಲಯ, ಪೀಠೋಪಕರಣ, ಸಿಬ್ಬಂದಿ ನೇಮಕ ಹಾಗೂ ಶಾಲೆಯ ದೈನಂದಿನ ಆಡಳಿತವನ್ನು ಸಮರ್ಥವಾಗಿ ನಿರ್ವಹಿಸಲು ಶಿಕ್ಷಣ ಕ್ಷೇತ್ರದ ಪರಿಣಿತರನ್ನೊಳಗೊಂಡ ಶಾಲಾಡಳಿತ ಮಂಡಳಿಯ ರಚನೆ ಈ ಎಲ್ಲವನ್ನೂ ಅತ್ಯಲ್ಪ ಅವಧಿಯಲ್ಲಿ ಕಾರ್ಯರೂಪಕ್ಕೆ ತರುವಲ್ಲಿ ಅಹರ್ನಿಶಿ ದುಡಿದ ಅಂದಿನ ಅಧ್ಯಕ್ಷ ಶ್ರೀ ಐ.ಎಂ.ಜಯರಾಮ ಶೆಟ್ಟಿಯವರು, ಗೌರವ ಕಾರ್ಯದರ್ಶಿ ಶ್ರೀ ಡಿ.ಚಂದ್ರಹಾಸ ರೈಯವರ ಅನನ್ಯ ಸೇವೆ ಶ್ಲಾಘನೀಯ.

ಎಲ್ಲಾ ಸೌಲಭ್ಯಗಳನ್ನೊಳಗೊಂಡ ಪರಿಪೂರ್ಣ ಶಾಲಾ ಸಂಕೀರ್ಣ, ಐ.ಸಿ.ಎಸ್.ಇ. ಪಠ್ಯಕ್ರಮ ಹಾಗೂ ಗುಣಮಟ್ಟದ ಶಿಕ್ಷಣದಿಂದ ನಮ್ಮ ವಿದ್ಯಾಸಂಸ್ಥೆಗೆ ದಿನೇ ದಿನೇ ಬೇಡಿಕೆ ಹೆಚ್ಚಾಗಿ ಸ್ಥಳಾವಕಾಶದ ಕೊರತೆಯಾದಾಗ ಇನ್ನೊಂದು ಅಂತಸ್ತನ್ನು ನಿರ್ಮಿಸಲಾಯಿತು. ಸಂಘದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ಹರೀಶ್ ಕುಮಾರ್ ಶೆಟ್ಟಿಯವರ ಅವಧಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯ ಹೆಚ್ಚಳದಿಂದ ಮೂಲಭೂತ ಸೌಲಭ್ಯಗಳ ಕೊರತೆಯನ್ನು ಮನಗಂಡು ಹೆಚ್ಚುವರಿ ಕಟ್ಟಡ (Golden Jubilee Block) ನಿರ್ಮಾಣ ಮಾಡಿ ಆ ಕಟ್ಟಡದಲ್ಲಿ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಯಿತು.

ಇಂದು ಸುಮಾರು 3500 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಗೆ ಅವಕಾಶ ಕಲ್ಪಿಸಿ ನಗರದ ಪ್ರತಿಷ್ಠಿತ ವಿದ್ಯಾಸಂಸ್ಥೆಯಾಗಿ ರೂಪುಗೊಂಡು ನಮ್ಮ ಸಮಾಜದ ಹೆಮ್ಮೆಯ ಪ್ರತೀಕವಾಗಿ ಬೆಳೆದು ನಿಂತಿದೆ. ಸಂಘದ ಆಸುಪಾಸಿನ ಜನರಿಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಶಿಕ್ಷಣ ನೀಡಿ ಮನ್ನಣೆ ಪಡೆಯುವುದರೊಂದಿಗೆ ಸಮುದಾಯದ ಸುಮಾರು ನೂರಾರು ಮಕ್ಕಳು ಈ ವಿದ್ಯಾಸಂಸ್ಥೆಯಲ್ಲಿ ಶಿಕ್ಷಣ ಪಡೆಯುತ್ತಿರುವುದು ಹೆಮ್ಮೆಯ ಸಂಗತಿ.

